# ವಾರ್ಷಿಕ ವರದಿ

## 2009-10 (01-04-2009 ರಿಂದ 31-03-2010)

### ಸೂಚಿಕೆ


| ಕ್ರ. ಸಂ. | ವಿಷಯಾನು ಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 1 | ಅರಣ್ಯ ಪ್ರದೇಶ | 1 |
| 2 | ಇಲಾಖೆಯ ಆಡಳಿತ ವ್ಯವಸ್ಥೆ | 1–2 |
| 3 | ಇಲಾಖೆಯ ಕಾರ್ಯಕಲಾಪಗಳು | 2–3 |
| 4 | ನಿರ್ವಹಣೆಯ ಪದ್ಧತಿ | 3–4 |
| 5 | ಅರಣ್ಯ ಉತ್ಪಾದನೆಯನ್ನು ತೆಗೆಯುವುದು ಮತ್ತು ಅದರ ವಿಲೇವಾರಿ | 4–6 |
| 6 | ಅಭಿವೃದ್ಧಿ ಚಟುವಟಿಕೆಗಳು | 6–14 |
| 7 | ಯೋಜನೆಗಳು | 15–24 |
| 8 | ಕಾರ್ಯ ಯೋಜನೆಗಳು, ಭೂಮಾಪನಾ ಮತ್ತು ಸೀಮಾ ನಿರ್ಣಯ | 25–29 |
| 9 | ಅರಣ್ಯ ಸಂಪನ್ಮೂಲ ನಿರ್ವಹಣೆ | 30–35 |
| 10 | ಅರಣ್ಯ ಅಭಿವೃದ್ಧಿ ನಿಧಿ | 35–36 |
| 11 | ವನ್ಯಜೀವಿ ಘಟಕ | 36–50 |
| 12 | ಪರಿಹಾರಾತ್ಮಕ ನೆಡುತೋಪುಗಳು | 50–52 |
| 13 | ಅರಣ್ಯ ಸಂಶೋಧನೆ ಮತ್ತು ಬಳಕೆ | 52–59 |
| 14 | ಅರಣ್ಯ ರಕ್ಷಣೆ ಮತ್ತು ಜಾಗೃತ | 60–61 |
| 15 | ಅರಣ್ಯ ತರಬೇತಿ | 62–67 |
| 16 | 12ನೇ ಆರ್ಥಿಕ ಆಯೋಗದ ಸವಿವರ | 68–71 |
| 17 | ನೇಮಕಾತಿ ಪ್ರಕ್ರಿಯೆ | 72 |
| 18 | ಜೈವಿಕ ಇಂಧನ ಕಾರ್ಯಪಡೆ | 72–73 |
| 19 | ಪಶ್ಚಿಮ ಘಟ್ಟ ಕಾರ್ಯಪಡೆ | 73 |
| 18 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು | 74–80 |
| 19 | ಕರ್ನಾಟಕ ಗೋಡಂಬಿ(ಗೇರು) ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು | 81–86 |
| 20 | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಬೆಂಗಳೂರು | 87–90 |
| 21 | ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಸಸ್ಯಗಳ ಪ್ರಾಧಿಕಾರ | 91–93 |

# ಕೋಷ್ಟಕಗಳು


| ಕೋಷ್ಟಕ ಸಂಖ್ಯೆ | ವಿಷಯಾನು ಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 1 | ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾವಾರು ಅರಣ್ಯ ಪ್ರದೇಶ | 94 |
| 2 | ವಿವಿಧ ವರ್ಗಗಳಲ್ಲಿ ಇರುವ ಅರಣ್ಯ ಪ್ರದೇಶ | 95 |
| 3 | ನೋಟಿಫಿಕೇಶನ್ ನಂ.16016/01/2004–ಎಐಎಸ್ II ಎ | 96–98 |
| 4 | ಅರಣ್ಯ ಇಲಾಖೆಯ ಆಡಳಿತ ವ್ಯವಸ್ಥೆಯನ್ನು ತೋರಿಸುವ ಪಟ್ಟಿ | 99–101 |
| 5 | ಚೌಬೀನೆ ಮತ್ತು ಇತರೆ ಮುಖ್ಯ ಅರಣ್ಯ ಉತ್ಪನ್ನಗಳು | 102 |
| 6 | ದಾಖಲಾದ ಚೌಬೀನೇತರ ಅರಣ್ಯ ಉತ್ಪನ್ನಗಳು | 103–104 |
| 7 | ಸಾರ್ವಜನಿಕ, ಗೃಹ ಬಳಕೆ ಮತ್ತು ಇತರೆ ಉದ್ದೇಶಗಳಿಗೆ ಸರಬರಾಜಾದ ಉರುವಲು ಪ್ರಮಾಣ | 105 |
| 8 | ಮೇದಾರರು ಮತ್ತು ಇತರರಿಗೆ ಸರಬರಾಜಾದ ಬೊಂಬುಗಳು | 106 |
| 9 | ನಿರ್ಮಿಸಲಾದ ನೆಡುತೋಪುಗಳ ವಿಸ್ತೀರ್ಣ | 107 |
| 10 | 2003–04 ರಿಂದ 2009–10ರವರೆಗೆ ನಿರ್ಮಿಸಲಾದ ನೆಡುತೋಪು | 108 |
| 11 | ರಾಜ್ಯ ವಲಯ ಯೋಜನೆಗಳಡಿಯಲ್ಲಿ ಆಗಿರುವ ಸಾಧನೆ | 109 |
| 12 | ಜಿಲ್ಲಾ ವಲಯ ಯೋಜನೆಗಳಡಿಯಲ್ಲಿ ಸಾಧಿಸಿದ ಪ್ರಗತಿ | 110 |
| 13 | ಕೇಂದ್ರ ಪುರಸ್ಕೃತ ಯೋಜನೆಗಳ ಆರ್ಥಿಕ ಸಾಧನೆ | 111 |
| 14 | ಕೇಂದ್ರೀಯ ಯೋಜನೆಗಳ ಆರ್ಥಿಕ ಸಾಧನೆ | 112 |
| 15 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ ಅಡಿಯಲ್ಲಿನ ಪ್ರಗತಿಯ ವರದಿ | 113 |
| 16 | ಅರಣ್ಯ ಅಪರಾಧ ಪ್ರಕರಣಗಳ ವಿವರ | 114–116 |
| 17 | ಸಿಬ್ಬಂದಿ ವಿವರ | 117 |

| ಕೋಷ್ಟಕ ಸಂಖ್ಯೆ | ವಿಷಯಾನು ಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 18 | ಆದಾಯ ಮತ್ತು ವೆಚ್ಚ | 118 |
| 19 | 2010–11ನೇ ಸಾಲಿನ ಯೋಜನೇತರ ಅಂದಾಜು ಮತ್ತು 2009–10ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು | 119 |
| 20 | ಆಯವ್ಯಯದಲ್ಲಿ ಯೋಜನಾವಾರು ಅಂದಾಜು | 120–123 |
| 21 | ಗ್ರಾಮ ಅರಣ್ಯ ಸಮಿತಿಗಳು | 124–125 |
| 22 | ಸಾರ್ವಜನಿಕ ದೂರುಗಳು ಮತ್ತು ಇತ್ಯರ್ಥವಾದ ಸವಿವರ | 126 |
| 23 | 2009–10ನೇ ಸಾಲಿನಲ್ಲಿ ಘೋಷಿಸಲಾದ ಸೆಕ್ಷನ್–4 ಮತ್ತು ಸೆಕ್ಷನ್–17 | 127 |

# ಕರ್ನಾಟಕ ಸರ್ಕಾರ
# 2009-10ನೇ ಸಾಲಿನ
# ಅರಣ್ಯ ಇಲಾಖೆಯ ವಾರ್ಷಿಕ ವರದಿ
# (01-04-2009 ರಿಂದ 31-03-2010)

## 1. ಅರಣ್ಯ ಪ್ರದೇಶ

ಕರ್ನಾಟಕ ಸರಕಾರವು ಸರಕಾರಿ ಆದೇಶ ಸಂಖ್ಯೆ ಎಫ್‌ಇಇ 270 ಎಫ್‌ಜಿಎಲ್ 2002 ರಲ್ಲಿ ತಜ್ಞ ಸಮಿತಿಯನ್ನು ರಚಿಸಲಾಗಿದ್ದು, ಅದು ಕರ್ನಾಟಕದಲ್ಲಿ 43356.39 ಚ.ಕಿ.ಮೀ ಅರಣ್ಯ ಪ್ರದೇಶ ಮತ್ತು ಪರಿಗಣಿತ ಅರಣ್ಯ ಎಂದು ಗುರುತಿಸಿರುತ್ತದೆ. ಅದರಲ್ಲಿ 33238.53 ಚ.ಕಿ.ಮೀ ಅರಣ್ಯದಲ್ಲಿ ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ವರ್ಗೀಕರಿಸಿದ ಅರಣ್ಯ, ಗ್ರಾಮ ಅರಣ್ಯ ಮತ್ತು ಖಾಸಗಿ ಅರಣ್ಯ ಎಂದು ಕಾನೂನು ಬದ್ದ ವಿಂಗಡನೆ ಹೊಂದಿದೆ. 10117.92 ಚ.ಕಿ.ಮೀ ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಲಾಗಿದ್ದು ಅದರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ಸೆಕ್ಷನ್-4, ಬೆಟ್ಟ ಭೂಮಿ, ಬಾನೆ, ಜಮ್ಮಾಮಲೈ ಕಾನ, ಕುಮಕಿ, ಪೈಸಾರಿ, ಅಮೃತ ಮಹಲ ಕಾವಲ್, ಖರಾಬಭೂಮಿ, ಇನಾಮಭೂಮಿ, ದಟ್ಟವಾದ ಮರ ಒಳಗೊಂಡಿರುವ ಪ್ರದೇಶ, ನೆಡುತೋಪು ಪ್ರದೇಶ ಒಳಗೊಂಡಿರುತ್ತದೆ. ಜಿಲ್ಲಾವಾರು ಅರಣ್ಯ ಪ್ರದೇಶವನ್ನು ಕೋಷ್ಟಕ-1ರಲ್ಲಿ ತೋರಿಸಲಾಗಿದೆ. ಕೋಷ್ಟಕ-2ರಲ್ಲಿ ಜಿಲ್ಲಾವಾರು ಅರಣ್ಯಪ್ರದೇಶವನ್ನು ವಿವಿಧ ವರ್ಗಗಳಲ್ಲಿ ತೋರಿಸಿದೆ.

## 2. ಇಲಾಖೆಯ ಆಡಳಿತ ವ್ಯವಸ್ಥೆ

ಭಾರತ ಸರಕಾರದ ಅಧಿನಿಯಮ ಸಂಖ್ಯೆ 16016/01/2004 AIS II(A) ದಿನಾಂಕ -9-2006 ರಂದು ಕರ್ನಾಟಕ ಭಾರತೀಯ ಅರಣ್ಯ ಸೇವೆ ವೃಂದದಲ್ಲಿ ಈ ಮುಂದೆ ವಿವರಿಸಿದಂತೆ ಹುದ್ದೆಗಳನ್ನು ಪುನರ್ ವಿಮರ್ಶಿಸಲಾಗಿದೆ. ರಾಜ್ಯದಲ್ಲಿ ಇರುವ ಹುದ್ದೆಗಳು ಒಟ್ಟು 164. ಕರ್ನಾಟಕದಲ್ಲಿ ಇರುವ ಭಾರತೀಯ ಅರಣ್ಯ ಸೇವೆಯ ಸವಿವರವನ್ನು ಕೋಷ್ಟಕ-3ರಲ್ಲಿ ತೋರಿಸಲಾಗಿದೆ.

ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಟಿ.ಪಿ.ಆರ್–21–ಎಸ್.ಇ.ಪಿ–02(2) ದಿನಾಂಕ 27–9–2006 ಪುನರ್ ಪ್ರಕಟಿತ ಅಧಿಸೂಚನೆ ಸಂಖ್ಯೆ 16016/01/2004/ಎ.ಐ.ಎಸ್.II(ಬಿ) ದಿನಾಂಕ ಸೆಪ್ಟಂಬರ್ 2006 ರಂದು ಭಾರತ ಸರ್ಕಾರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಮತ್ತು ನಿವೃತ್ತಿ ವೇತನಗಳು DOPI. ಕರ್ನಾಟಕದಲ್ಲಿ ಭಾರತೀಯ ಅರಣ್ಯ ಸೇವೆಯ ಅಧಿಕೃತ ಒಟ್ಟು ಹುದ್ದೆಗಳು 164.

### 3. ಇಲಾಖೆಯ ಕಾರ್ಯಕಲಾಪಗಳು

ಅರಣ್ಯಗಳ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ, ಕ್ಷೀಣಿತ ಹಾಳಾದ ಅರಣ್ಯಗಳ ಪುನರ್ ನಿರ್ಮಾಣ, ಬಂಜರು ಪ್ರದೇಶಗಳಲ್ಲಿ ವನ ನಿರ್ಮಾಣ ಮತ್ತು ವಿಸ್ತರಣೆ, ಕೃಷಿ ಪ್ರದೇಶಗಳಲ್ಲಿ ಮರ ಬೆಳೆಸುವುದು, ಸಾಮಾಜಿಕ ವನ ನಿರ್ಮಾಣ ಕಾರ್ಯಕ್ರಮದಲ್ಲಿ ತಾಂತ್ರಿಕ ಸಿಬ್ಬಂದಿಯನ್ನು ಜಿಲ್ಲಾಪಂಚಾಯತ್‌ಗಳಿಗೆ ನಿಯೋಜನೆಯ ಮೇಲೆ ಕಳುಹಿಸಿವುದು. ವನ ನಿರ್ಮಾಣದ ಮೂಲಕ ಭೂಸಾರ ಸಂರಕ್ಷಣೆ ಮತ್ತು ಆರ್ದ್ರತೆ ಕಾಯ್ದುಕೊಳ್ಳುವಿಕೆ, ಅರಣ್ಯದಲ್ಲಿ ಬೇಟೆಯಾಡುವುದನ್ನು ತಡೆಗಟ್ಟುವುದು, ಅರಣ್ಯ ಉತ್ಪನ್ನಗಳ ಕಳ್ಳಸಾಗಣಿಕೆ ತಡೆಯುವುದು ಮತ್ತು ಕಾಡ್ಗಿಚ್ಚನ್ನು ತಡೆಯುವುದು, ಗೃಹ ನಿರ್ಮಾಣಕ್ಕಾಗಿ ಚೌಬೀನೆ ಮತ್ತು ಉರುವಲು ಸೌದೆಗಳ ಪೂರೈಕೆ. ಬಿದಿರನ್ನು ಮತ್ತು ಚೌಬೀನೇತರ ಅರಣ್ಯ ಉತ್ಪನ್ನಗಳನ್ನು ಅರಣ್ಯದಲ್ಲಿರುವ ಮತ್ತು ಅರಣ್ಯದ ಸುತ್ತಲೂ ಇರುವ ಪರಿಶಿಷ್ಟ ಪಂಗಡಗಳವರಿಗೆ ಒದಗಿಸುವುದಲ್ಲದೆ ಅರಣ್ಯ ಇಲಾಖೆಯು ಜವಾಬ್ದಾರಿಯುತವಾಗಿ ಅರಣ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಬೆಳೆಸಿ ಉಳಿಸುವುದಾಗಿದೆ.

ಚೌಬೀನೆ, ಉರುವಲು ಸೌದೆ ಮತ್ತು ಇತರ ಚೌಬೀನೇತರ ಅರಣ್ಯ ಉತ್ಪನ್ನಗಳ ಮಾರಾಟದಿಂದ ಆದಾಯದ ಸೃಜನೆಯು ಅರಣ್ಯದ ಪ್ರತ್ಯಕ್ಷ ಪ್ರತಿಫಲವಾಗಿದೆ. ಅರಣ್ಯದ ಅಪ್ರತ್ಯಕ್ಷ ಉಪಯೋಗವು ರಾಜ್ಯಕ್ಕೆ ಮತ್ತು ದೇಶಕ್ಕೆ ಆಗಾಧ ಪ್ರಮಾಣದ್ದಾಗಿದೆ. ಪರಿಸರ ಸಮತೋಲನ ಕಾಯ್ದುಕೊಳ್ಳುವುದು ಅಂತರ್ಜಲ ಪೂರಣ ಕಾರ್ಯ, ನದಿಗಳ ಜಲಾನಯನ ಪ್ರದೇಶಗಳ ಅಭಿವೃದ್ಧಿ ಗೊಳಿಸುವುದು ಜಾನುವಾರುಗಳಿಗೆ ಹಸಿರು ಗೊಬ್ಬರ ಮೇವು ಒದಗಿಸುವಿಕೆ

ಇತ್ಯಾದಿ ಅಪ್ರತ್ಯಕ್ಷ ಪ್ರತಿಫಲಗಳಾಗಿವೆ. ಈ ಜಲಾನಯನ ಪ್ರದೇಶವು ಮೈದಾನ ಪ್ರದೇಶಗಳಲ್ಲಿ ಆಶ್ರಯ ವಲಯವಾಗಿಯೂ ಮತ್ತು ವಾಯುತಡೆಗಳಾಗಿಯೂ ಕಾರ್ಯ ನಿರ್ವಹಿಸುತ್ತಿವೆ ಮತ್ತು ಭೂಸವಕಳಿ ತಡೆಯುವುದಾಗಿದೆ. ಈ ಎಲ್ಲಾ ಪ್ರತಿಫಲಗಳನ್ನು ಪ್ರಮಾಣದಲ್ಲಿ ಅಳೆಯಲು ಅಸಾಧ್ಯವಾಗಿರುತ್ತದೆ.

ಕರ್ನಾಟಕದಲ್ಲಿರುವ ನಿತ್ಯ ಹರಿದ್ವರ್ಣದ ಕಾಡುಗಳಿಂದ ಕೂಡಿದ ಪಶ್ಚಿಮ ಘಟ್ಟ ಪ್ರದೇಶದ ಅರಣ್ಯವು ಜೀವ ವೈವಿಧ್ಯವುಳ್ಳ ಒಂದು ಮಹತ್ವದ ಸ್ಥಳವಾಗಿ ವಿಶ್ವದಲ್ಲಿ ಪರಿಗಣಿಸಲ್ಪಟ್ಟಿದೆ.

ವಿಶ್ವದಲ್ಲಿ ಭವಿಷ್ಯತ್ತಿನಲ್ಲಿ ಆಗಬಹುದಾದ ಪರಿಸರ ಮತ್ತು ಜೀವ ವೈವಿಧ್ಯದಲ್ಲಿ ಆಘಾತಕಾರಿ ವಿಷಯಗಳ ಬಗ್ಗೆ ನಿಯಂತ್ರಣಗೊಳಿಸಲು ಕರ್ನಾಟಕದಲ್ಲಿರುವ ಪಶ್ಚಿಮ ಘಟ್ಟ ಅರಣ್ಯ ಪ್ರದೇಶವು ಒಂದು ಮಹತ್ವದ ಪಾತ್ರವಹಿಸುತ್ತದೆ. ಇದು ರಾಜ್ಯದಲ್ಲಿ ವಿನಾಶದ ಅಂಚಿನಲ್ಲಿರುವ ಹುಲಿ, ಚಿರತೆ, ಆನೆ, ಕಾಡೆಮ್ಮೆ, ಸಿಂಗಳಿಕ, ಕರಡಿ, ಹಾರುವ ಅಳಿಲು, ಹಾರ್ನಬಿಲ್, ಕರಿನಾಗ ಇತ್ಯಾದಿ ಪ್ರಾಣಿಗಳ ವಾಸಸ್ಥಾನವಾಗಿರುತ್ತದೆ.

## 4. ನಿರ್ವಹಣೆಯ ಪದ್ಧತಿ

ಕರ್ನಾಟಕ ಅರಣ್ಯವನ್ನು ರಾಷ್ಟ್ರೀಯ ಅರಣ್ಯ ನೀತಿ 1988ರಲ್ಲಿ ತಿಳಿಸಿಲಾದ ಚೌಕಟ್ಟಿನ ಅಡಿಯಲ್ಲಿ ನಿರ್ವಹಣೆಯನ್ನು ಈ ಕೆಳಗೆ ತಿಳಿಸಿದ ಪ್ರಕಾರ ಮೂರು ವಿಧದಲ್ಲಿ ಮಾಡಲಾಗಿದೆ.

- ಸಮರ್ಥನೀತಿ ಅರಣ್ಯ ಅಭಿವೃದ್ಧಿಗೊಳಿಸುವುದು ಮತ್ತು ಸ್ಥಳೀಯ ಜನರ ಬೇಡಿಕೆಗೆ ಆದ್ಯ ಗಮನ ನೀಡಿ ಅರಣ್ಯ ನಿರ್ವಹಣೆ ಮಾಡುವುದು.
- ಗ್ರಾಮ ಅರಣ್ಯ ಸಮಿತಿಗಳ ಮುಖಾಂತರ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯ ಅಡಿಯಲ್ಲಿ ಸ್ಥಳೀಯ ಜನರ ಸಹಕಾರದೊಂದಿಗೆ ಕ್ಷೀಣಿತ ಅರಣ್ಯದ ಸಂರಕ್ಷಣೆ ಮತ್ತು ನಿರ್ವಹಣೆ ಮಾಡುವುದಾಗಿದೆ.
- ಜೀವಿ ವೈವಿಧ್ಯ ಸಂರಕ್ಷಣೆ ಮತ್ತು ನಿಸರ್ಗ ಪ್ರವಾಸೋದ್ಯಮ

ಎಲ್ಲಾ ಪ್ರಾದೇಶಿಕ ಅರಣ್ಯ ವಿಭಾಗಗಳಿಗೂ ಕಾರ್ಯಯೋಜನಾ ವರದಿಯನ್ನು ತಯಾರಿಸಲಾಗಿದೆ. ಕಾರ್ಯಯೋಜನೆಯ ಅನ್ವಯ ಕಡ್ಡಾಯವಾಗಿ ಕೆಲಸ ಮಾಡಲಾಗುತ್ತಿದೆ. ಅರಣ್ಯ ಇಲಾಖೆಯು ಈ ಮೊದಲು ಅನುಸರಿಸುತ್ತಿದ್ದ ಅರಣ್ಯ ಕೃಷಿ ಪದ್ದತಿ, ಪೂರ್ತಿಯಾಗಿ ತೆಗೆದು ನೆಡುತೋಪು ನಿರ್ಮಾಣ ಗೊಳಿಸುವ ಪದ್ದತಿಗಳನ್ನು ಕೈ ಬಿಡಲಾಗಿದೆ. ಏಕೆಂದರೆ ಈ ಪದ್ದತಿಯಿಂದ ಸ್ಥಳೀಯ ಪರಿಸರ ಮತ್ತು ಜೀವ ವೈವಿಧ್ಯಗಳಿಗೆ ಹಾನಿಯಾಗುತ್ತದೆ. ಒಟ್ಟು ಅರಣ್ಯದ ನಿರ್ವಹಣೆಯ ಮೇಲೆ ಒತ್ತಡ ತಪ್ಪಿಸುವುದಕ್ಕಾಗಿ ಬಿದ್ದ ಮತ್ತು ಸತ್ತ ಮರಗಳಿಂದ ಚೌಬೀನೆ ಮತ್ತು ಉರುವಲು ಸೌದೆಯನ್ನು ತೆಗೆಯಲಾಗುತ್ತಿದೆ. ಕೈಗಾರಿಕೆಗಳಿಗೆ ಮರವನ್ನು ನೆಡುತೋಪು ಪ್ರದೇಶದಿಂದ ಮಾತ್ರ ತೆಗೆಯುವುದಾಗಿದೆ. ಚೌಬೀನೆ ಉರುವಲು ಸೌದೆ. ಪಲ್ಪು ವುಡ್, ಬಿದಿರು, ಬೆತ್ತಗಳನ್ನು ಸುಧಾರಿಸಿದ ಪದ್ದತಿಯಲ್ಲಿ ಕತ್ತರಿಸಲಾಗುತ್ತಿದೆ. ಉರುವಲು ಸೌದೆಯ ನೆಡುತೋಪುಗಳನ್ನು ತೆಗೆಯುವಾಗ ಕಡ್ಡಾಯವಾಗಿ ಆ ಸ್ಥಳದಲ್ಲಿ ಸೂಕ್ತವಾದ ಮರಗಳನ್ನು ಬೆಳೆಸುವುದರ ಕಡೆಗೆ ಗಮನ ಕೊಡಲಾಗುತ್ತಿದೆ. ಚೌಬೀನೇತರ ಅರಣ್ಯ ಉತ್ಪನ್ನಗಳನ್ನು ಬೃಹತ್ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘ (LAMPS), ಗುತ್ತಿಗೆದಾರರ ಮೂಲಕ ವಿಲೇವಾರಿ ಮಾಡಲಾಗುತ್ತದೆ.

## 5. ಅರಣ್ಯ ಉತ್ಪಾದನೆಯನ್ನು ತೆಗೆಯುವುದು ಮತ್ತು ಅದರ ವಿಲೇವಾರಿ

ಬಿದ್ದ ಹಾಗೂ ಒಣಗಿದ ಮರಗಳನ್ನು ಮಾತ್ರ ಕಡಿಯಲು ಅವಕಾಶ ನೀಡಲಾಗಿದೆ. ಸರ್ಕಾರಿ ಉದ್ಯಮವಾಗಿರುವ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ, ಮರದ ದಿಮ್ಮಿಗಳನ್ನು ತಯಾರಿಸುವ ಕೆಲಸಗಳನ್ನು ಕೈಗೊಳ್ಳಲು ಪ್ರೋತ್ಸಾಹವನ್ನು ನೀಡುವುದರಲ್ಲಿ ನಿರತವಾಗಿದೆ.

ಉತ್ತರ ಕನ್ನಡ ಅರಣ್ಯ ವೃತ್ತದಲ್ಲಿ ಕೂಪುಗಳನ್ನು ಲಾಗಿಂಗ್ ಕೆಲಸಕ್ಕಾಗಿ ಒಪ್ಪಿದ ದರಗಳಲ್ಲಿ ಅರಣ್ಯ ಕಾರ್ಮಿಕರ ಸಹಕಾರ ಸಂಘಗಳವರಿಗೆ ವಹಿಸಲಾಗಿದೆ. ಅರಣ್ಯ ಉತ್ಪನ್ನಗಳು ಮುಖ್ಯ ಅರಣ್ಯ ಉತ್ಪನ್ನ ಮತ್ತು ಕಿರು ಅರಣ್ಯ ಉತ್ಪನ್ನ ಸಾಮಗ್ರಿಗಳ ಪ್ರಮಾಣವನ್ನು ಕೋಷ್ಟಕ (5) ಮತ್ತು (6) ರಲ್ಲಿ

ಅನುಕ್ರಮವಾಗಿ ನೀಡಲಾಗಿದೆ. ಕೋಷ್ಟಕ (7) ರಲ್ಲಿ ಉರುವಲು ಪ್ರಮಾಣವನ್ನು, ಕೋಷ್ಟಕ (8) ರಲ್ಲಿ ಒದಗಿಸಿದ ಬಿದುರುಗಳ ಪ್ರಮಾಣವನ್ನು ಕೊಡಲಾಗಿದೆ.

## ಬೃಹತ್ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘ (LAMPS)

ಮೈಸೂರು, ಚಾಮರಾಜನಗರ, ದಕ್ಷಿಣಕನ್ನಡ, ಕೊಡಗು, ಉತ್ತರಕನ್ನಡ ಮತ್ತು ಉಡುಪಿಯ ಅರಣ್ಯ ವಿಸ್ತೀರ್ಣದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಉತ್ತಮ ರೀತಿಯಲ್ಲಿ ಚೌಬೀನೇತರ ಅರಣ್ಯ ಉತ್ಪನ್ನಗಳ ಸದ್ಬಳಕೆಗಾಗಿ ಬೃಹತ್ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. 21 ಬೃಹತ್ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳಿಂದ ಸರಕಾರಿ ಆದೇಶ ಸಂಖ್ಯೆ ದಿನಾಂಕ 20–7–2001ರ ಅನ್ವಯ ರೂ.100/– ವಸೂಲು ಮಾಡಿಕೊಂಡು ಚೌಬೀನೇತರ ಅರಣ್ಯ ಉತ್ಪನ್ನ ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ.

### ವಿಲೆಯ ವಿಧಾನ

ಚೌಬೀನೆ ಮತ್ತು ಸರ್ಕಾರಿ ಡಿಪೋಗಳ ಅರಣ್ಯ ಉತ್ಪಾದನೆಯನ್ನು ವಿಲೆ ಮಾಡಲು ಈ ಕೆಳಕಂಡ ಎರಡು ವಿಧಾನಗಳಿವೆ:–

ಅ) ಹರಾಜು ಮಾರಾಟದ ಮೂಲಕ
ಆ) ಚಿಲ್ಲರೆ ಮಾರಾಟದ ಮೂಲಕ

### ಅ) ಹರಾಜು ಮಾರಾಟದ ಮೂಲಕ

ಡಿಪೋಗಳಿಂದ ಬಂದ ಚೌಬೀನೆಯನ್ನು ಗುಣ, ದಪ್ಪ ಮತ್ತು ಉದ್ದದಂತೆ ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿದ್ದು ಬೇರೆ ಬೇರೆ ಗುಣ ಮಟ್ಟಗಳ ಚೌಬೀನೆಗಳಿಗೆ ಹಿಂದಿನ ದರಗಳನ್ನು ಆಧರಿಸಿ ಪ್ರತಿಯೊಂದು ಗುಂಪಿನ ಚೌಬೀನೆಯ ಮೌಲ್ಯಗಳನ್ನು ನಿರ್ಧರಿಸಿ ಅವುಗಳನ್ನು ಸಾರ್ವಜನಿಕರ ಹರಾಜಿಗೆ ಇಡಲಾಗುವುದು. ಸಾಮಾನ್ಯವಾಗಿ ಪ್ರತಿಯೊಂದು ಡಿಪೋವಿನಲ್ಲಿ

ಒಂದೊಂದು ವರ್ಷಕ್ಕೆ 2 ಬಾರಿ ಮಾರಾಟ ಮಡಲಾಗುತ್ತದೆ. ಈ ಮಾರಾಟವನ್ನು ಸಾಮಾನ್ಯವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ನಡೆಸುತ್ತಾರೆ.

**ಆ) ಚಿಲ್ಲರೆ ಮಾರಾಟದ ಮೂಲಕ:**

ಸದರಿ ವಿಭಾಗದಲ್ಲಿ ಡಿಪೋದಲ್ಲಿ ರಾಶಿ ಹಾಕಿರುವ ಚೌಬೀನೆ ಮತ್ತು ಇತರ ಅರಣ್ಯ ಉತ್ಪನ್ನಗಳನ್ನು ಕಾಲ ಕಾಲಕ್ಕೆ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿದ ದರಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸೇರಿದಂತೆ ಮೇಲಧಿಕಾರಿಗಳಿಗೆ ದರಗಳ ಅನುಸೂಚಿಯಲ್ಲಿ ಹೇಳಿರುವಂತೆ ಸಣ್ಣ ಪ್ರಮಾಣದ ಮಾರಾಟಕ್ಕೆ ಮಂಜೂರಾತಿ ನೀಡುವ ಅಧಿಕಾರ ಇದೆ. ಇಲಾಖೆಯಿಂದ ಇಂತಹ ರೀತಿಯಲ್ಲಿ ಬಿಡುಗಡೆ ಮಾಡುವ ಚೌಬೀನೆ ಸ್ವಂತ ಉಪಯೋಗಕ್ಕೆ ಮಾತ್ರ ಸೀಮಿತವಾಗಿರುತ್ತದೆ.

## 6. ಅಭಿವೃದ್ಧಿ ಚಟುವಟಿಕೆಗಳು

**ಜಿಲ್ಲಾ ವಲಯದ ಯೋಜನೆಗಳು:**

ರಾಜ್ಯದ ಸಾಮಾಜಿಕ ಅರಣ್ಯ ವಿಭಾಗಗಳಿಂದ ಜಿಲ್ಲಾ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳು ಈ ಕೆಳಕಂಡಂತೆ ಇದೆ.

**1) 2406–01–198–1–01 ವನಸಂವರ್ಧನ ಯೋಜನೆ:**

ಈ ಯೋಜನೆಯು 2001–02ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಖಾಸಗಿ – ಸಾರ್ವಜನಿಕರ ಸಹಭಾಗಿತ್ವದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಅನೇಕ ಧಾರ್ಮಿಕ ಸಂಸ್ಥೆಗಳು, ಸರ್ಕಾರೇತರ ಸಂಘ ಸಂಸ್ಥೆಗಗಳು ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡಿದ್ದು ಅವುಗಳಿಗೆ

ಉಚಿತವಾಗಿ ಸಸಿಗಳನ್ನು ವಿತರಿಸಲಾಗುತ್ತಿದೆ. 2009-10ನೇ ಸಾಲಿನಲ್ಲಿ ರೂ.178.131 ಲಕ್ಷಗಳ ಅನುದಾನ ನಿಗಧಿ ಯಾಗಿದ್ದು ಅದರಲ್ಲಿ ರೂ.178.131 ಲಕ್ಷವನ್ನು ಸರ್ಕಾರವು ಬಿಡುಗದೆ ಮಾಡಿದೆ. ಮಾರ್ಚ್-2010ರ ಅಂತ್ಯಕ್ಕೆ ರೂ.175.140 ಲಕ್ಷಗಳನ್ನು ವೆಚ್ಚ ಮಾಡಿ, 32.597ಲಕ್ಷ ಸಸಿಗಳನ್ನು ಬೆಳೆಸಿ, 34.11 ಲಕ್ಷ ಸಸಿಗಳನ್ನು ನಿರ್ವಹಣೆ ಮಾಡಲಾಗಿದೆ.

**2) 2406-01-196-1-01 ಕಟ್ಟಡಗಳು:-**

ಈ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ವಸತಿಗೃಹಗಳು, ಕಛೇರಿ ಕಟ್ಟಡಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ಹೊಂದಲಾಗಿದೆ ಹಾಗೂ ಹಳೆಯ ಕಟ್ಟಡಗಳ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. 2009-10ನೇ ಸಾಲಿನಲ್ಲಿ ರೂ.112.99 ಲಕ್ಷಗಳ ಗುರಿ ಇದ್ದು, ಮಾರ್ಚ್-2010ರ ಮಾಹೆಯ ಅಂತ್ಯದ ವರೆಗೆ ಪೂರ್ಣ ಪ್ರಮಾಣದಲ್ಲಿ ಹಣ ಸರ್ಕಾರದಿಂದ ಬಿಡುಗಡೆಯಾಗಿದ್ದು, ರೂ.112.96 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3) 2406-01-196-1-01-300 ವಿಶೇಷ ಅಭಿವೃದ್ದಿ ಯೋಜನೆ :-**

ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯನ್ವಯ 2008-09ನೇ ಸಾಲಿನಿಂದ ರಾಜ್ಯದ ಒಟ್ಟು 114 ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ. ಅರಣ್ಯ ವಲಯಗಳಲ್ಲಿ ಉದ್ಯೋಗ ಅವಕಾಶವನ್ನು ಕಲ್ಪಿಸುವುದರ ಮೂಲಕ ಮುಂದುವರೆದ ಹಾಗೂ ಹಿಂದುಳಿದ ತಾಲ್ಲೂಕುಗಳ ನಡುವೆ ಇರುವ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

2009-10ನೇ ಸಾಲಿನಲ್ಲಿ ಕೂಡ ಸದರಿ ಯೋಜನೆಯು ಮುಂದುವರೆದಿದ್ದು, ಇದಕ್ಕೆ ಒಟ್ಟಾರೆ ರೂ.2000.00 ಲಕ್ಷ ವಾರ್ಷಿಕ ಅನುದಾನವನ್ನು ಹಂಚಿಕೆ ಮಾಡಿದ್ದು, ಪೂರ್ಣ ಪ್ರಮಾಣದ ಹಣ

ಬಿಡುಗಡೆಯಾಗಿದೆ. ಮಾರ್ಚ್–2010ರ ಅಂತ್ಯಕ್ಕೆ ಒಟ್ಟು ರೂ.1980.356 ಲಕ್ಷಗಳನ್ನು ವೆಚ್ಚ ಮಾಡಿ 9827ಹೆ. ನೆಡುತೋಪು ಬೆಳೆಸಲಾಗಿದೆ, 2673 ಹೆ. ಪ್ರದೇಶದಲ್ಲಿ ಮುಂಗಡ ಕಾಮಗಾರಿಯನ್ನು ಕೈಗೊಂಡು, ಒಟ್ಟು 39.14 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ ಮತ್ತು 1451 ಹೆ. ಪ್ರದೇಶದ ಹಳೆಯ ನೆಡುತೋಪನ್ನು ನಿರ್ವಹಣೆ ಮಾಡಲಾಗಿದೆ.

**ರಾಜ್ಯ ವಲಯ ಯೋಜನೆ**

**1) 2406–01–101–2–05 ಕ್ಷೀಣಿತ ಅರಣ್ಯಗಳ ಅಭಿವೃದ್ಧಿ ಯೋಜನೆ:–**

ಈ ಯೋಜನೆಯಲ್ಲಿ ಅರಣ್ಯೀಕರಣ ಮೂಲಕ ಕ್ಷೀಣಿತ ಅರಣ್ಯ ಪ್ರದೇಶದ ಪುನರುಜ್ಜೀವನಗೊಳಿಸಿ ಅರಣ್ಯಗಳನ್ನು ದನಕರುಗಳ ಮೇಯುವಿಕೆಯಿಂದ ತಪ್ಪಿಸುವುದು ಮತ್ತು ಬೆಂಕಿಯಿಂದ ರಕ್ಷಿಸಲು ಉದ್ದೇಶಿಸಲಾಗಿದೆ. ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಸ್ವಾಭಾವಿಕ ಅರಣ್ಯಗಳ ಪುನರುತ್ಪತ್ತಿ ಮತ್ತು ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ಥಳದ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಮತ್ತು ಸ್ಥಳೀಯ ಜನರ ಬೇಡಿಕೆಯನ್ನು ನೋಡಿಕೊಂಡು ಅವರಿಗೆ ಅವಶ್ಯವಿರುವ ಮರಮುಟ್ಟುಗಳ ಜಾತಿ, ಉರುವಲು ಮತ್ತು ಮೇವು ಜಾತಿಯ ಗಿಡಗಳನ್ನು ನೆಡಲಾಗಿದೆ. 2009–10ನೇ ಸಾಲಿನಲ್ಲಿ **ರೂ.332.00** ಲಕ್ಷಗಳ ಆಯವ್ಯಯ ಹಂಚಿಕೆಯಲ್ಲಿ ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾಗಿದ್ದು, ರೂ.329.07 ಲಕ್ಷಗಳನ್ನು ವೆಚ್ಚ ಮಾಡಿ 942 ಹೆ. ನೆಡುತೋಪು ನಿರ್ಮಾಣ, 936 ಹೆ. ಮುಂಗಡ ಕಾಮಗಾರಿ ಹಾಗೂ 2074 ಹೆ. ಹಳೆಯ ನೆಡುತೋಪುಗಳ ನಿರ್ವಹಣೆ ಕಾಮಗಾರಿಗೆ ವೆಚ್ಚ ಮಾಡಲಾಗಿದೆ.

**2) <u>2406–01–101–2–10– ನಗರ ಪ್ರದೇಶ ಹಸರೀಕರಣ ಯೋಜನೆ:</u>**

ನಗರ ಪ್ರದೇಶಗಳ ಪರಿಸರ ಸಮತೋಲನವನ್ನು ಕಾಪಾಡಲು ಮಹಾನಗರ ಪಾಲಿಕೆ, ನಗರ ಪಾಲಿಕೆ, ಹಾಗೂ ಮುನಿಸಿಪಲ್ ಪ್ರದೇಶಗಳಲ್ಲಿ ಸಾಲು ಮರಗಳ ನೆಡುತೋಪು ಮತ್ತು ಬ್ಲಾಕ್ ನೆಡುತೋಪುಗಳನ್ನು

ಬೆಳೆಸಲಾಗುತ್ತಿದೆ. 2009–10ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ **ರೂ. 300.00** ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡಲಾಗಿದೆ. **ರೂ.293.83** ಲಕ್ಷಗಳನ್ನು ವೆಚ್ಚಮಾಡಿದ್ದು, 2009ರ ಮಳೆಗಾಲದಲ್ಲಿ 573ಕಿ.ಮೀ. ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ ಮತ್ತು 1566 ಹೆಕ್ಟೇರ್ ನೆಡುತೋಪು ನಿರ್ವಹಣೆ ಜೊತೆಗೆ 1.192 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

### 3) <u>2406–01–102–2–22 ಸಾರ್ವಜನಿಕರಿಗೆ ವಿತರಣೆಗಾಗಿ ಸಸಿ ಬೆಳೆಸುವ ಕಾರ್ಯಕ್ರಮ ಯೋಜನೆ:–</u>

ಈ ಯೋಜನೆಯಡಿ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ, ರೈತರಿಗೆ ಸಂಘಸಂಸ್ಥೆಗಳಿಗೆ ಗ್ರಾಮ ಅರಣ್ಯ ಸಮಿತಿಗಳ ಮೂಲಕ ಸಸಿಗಳನ್ನು ವಿತರಣೆ ಮಾಡುವ ಸಲುವಾಗಿ ಸಸಿಗಳನ್ನು ಆಯಾ ಪ್ರದೇಶಗಳಿಗೆ ಹೊಂದಿಕೊಳ್ಳುವ ಜಾತಿಯ 4"X6", 5"X8" ಮತ್ತು 8"X12"ರ ಅಳತೆಯ ಸಸಿಗಳನ್ನು ಆಯ್ಕೆ ಮಾಡಿ ಬೆಳೆಸಲಾಗುತ್ತಿದ್ದು, 2009–10 ನೇ ಸಾಲಿಗೆ **ರೂ.128.43** ಲಕ್ಷಗಳ ಆಯಮ್ಯಯ ಹಂಚಿಕೆಯಲ್ಲಿ ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಹಣ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ರೂ.127.98 ಲಕ್ಷಗಳನ್ನು ವೆಚ್ಚ ಮಾಡಿ 22.302 ಲಕ್ಷ ಸಸಿಗಳನ್ನು 2010ನೇ ಮಳೆಗಾಲದಲ್ಲಿ ಸಾರ್ವಜನಿಕರಿಗೆ ವಿತರಿಸಲು ಬೆಳೆಸಲಾಗಿದೆ ಹಾಗೂ ರಿಯಾಯಿತಿ ದರದಲ್ಲಿ 2009ನೇ ಮಳೆಗಾಲದಲ್ಲಿ 33.647 ಲಕ್ಷ ಸಸಿಗಳನ್ನು ವಿತರಿಸಲಾಗಿದೆ.

### 4) <u>2406–01–102–2–25 ನಿಸರ್ಗ ಪ್ರವಾಸೋದ್ಯಮ ಯೋಜನೆ:–</u>

2009–10ನೇ ಸಾಲಿಗೆ ಈ ಯೋಜನೆಯಡಿ **ರೂ. 160.00** ಲಕ್ಷಗಳ ಆಯವ್ಯಯ ಹಂಚಿಕೆಯಲ್ಲಿ ಮಾರ್ಚ್–2010ರ ಅಂತ್ಯಕ್ಕೆ ರೂ.103.75 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಪೂರ್ಣ ಪ್ರಮಾಣದ ಹಣವನ್ನು ವೆಚ್ಚ ಮಾಡಿ ಪ್ರವಾಸಿಗರಿಗೆ ಅನುಕೂಲವಾಗುವಂತಹ ನಿಸರ್ಗ ಪರಿಸರಾಭಿವೃದ್ಧಿ ಕಾರ್ಯಕ್ರಮಗಳು, ಪ್ರವಾಸಿತಾಣ, ಪರಗೋಲ ಹಾಗೂ

ವೀಕ್ಷಣಾಗೋಪುರಗಳ ನಿರ್ಮಾಣ, ಕುಡಿಯುವ ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

**5) <u>4406–01–070–0–02 ಭೂಮಿ ಮತ್ತು ಕಟ್ಟಡಗಳ ಯೋಜನೆ:–</u>**

ಈ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಕಛೇರಿ ಕಟ್ಟಡ ನಿರ್ಮಾಣ, ವಸತಿಗೃಹಗಳ ನಿರ್ಮಾಣ, ಕಾಂಪೌಂಡ್ ಗೋಡೆ, ಶೌಚಾಲಯ ನಿರ್ಮಾಣ ಇತ್ಯಾದಿಗಳಿಗೆ ಉಪಯೋಗಿಸಲಾಗುತ್ತಿದೆ. 2009–10ನೇ ಸಾಲಿಗೆ **ರೂ. 166.00** ಲಕ್ಷಗಳ ಆಯವ್ಯಯ ಹಂಚಿಕೆಯಲ್ಲಿ ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಹಣ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ರೂ.165.940 ಲಕ್ಷಗಳನ್ನು ವೆಚ್ಚ ಮಾಡಿ ಸಿಬ್ಬಂದಿ ವಸತಿಗೃಹ, ಕಛೇರಿ ಕಟ್ಟಡ, ಕಾಂಪೌಂಡ್ ಗೋಡೆ, ಶೌಚಾಲಯ ನಿರ್ಮಾಣ ಇತ್ಯಾದಿ ಹಾಗೂ ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

**6) <u>2406–01–101–2–24 ಶ್ರೀಗಂಧ ನೆಡುತೋಪುಗಳ ರಕ್ಷಣೆ ಮತ್ತು ನಿರ್ವಹಣೆ:–</u>**

ಒಟ್ಟು 100 ಹೆ. ಶ್ರೀಗಂಧದ ನೆಡುತೋಪುಗಳ ರಕ್ಷಣೆ ಮತ್ತು ಸ್ವಾಭಾವಿಕವಾಗಿ ಶ್ರೀಗಂಧ ಬೆಳೆದಿರುವ ಪ್ರದೇಶಗಳ ರಕ್ಷಣೆ ಮತ್ತು ನಿರ್ವಹಣೆ ಕಾರ್ಯವು ಈ ಯೋಜನೆಯ ಪ್ರಧಾನ ಗುರಿಯಾಗಿದೆ. ಸದರಿ ಯೋಜನೆಯಡಿ ನೆಡುತೋಪುಗಳಿಗೆ ಚೈನ್ ಲಿಂಕ್ ಮೆಷ್‌ನಿಂದ ಬೇಲಿಯನ್ನು ಅಳವಡಿಸುವುದು. ಕಾವಲು ಕಾಯುವುದು, ಮಣ್ಣು ಕೆಲಸ, Cultural Operation ಕೆಲಸ ಒಳಗೊಂಡ ಈ ಕಾರ್ಯಕ್ಕೆ ಒಟ್ಟಾರೆ **ರೂ.215.00** ಲಕ್ಷಗಳ ಗುರಿ ನಿಗದಿಪಡಿಸಿದ್ದು, **ರೂ.165.00** ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.164.98 ಲಕ್ಷ ವೆಚ್ಚ ಭರಿಸಲಾಗಿದೆ.

7) **2406–01–102–2–81–422 ವಿಶೇಷ ಘಟಕ ಯೋಜನೆ:–**

2009–10ನೇ ಸಾಲಿನಲ್ಲಿ ಪುನ: ಪ್ರಸ್ತುತ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಹಣ್ಣಿನ ಗಿಡಗಳನ್ನು ನಗರ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬದವರ ವಾಸಸ್ಥಳದ ಆವರಣದಲ್ಲಿ ನೆಡುವುದರ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆರ್ಥಿಕ ಮಟ್ಟ ಸುಧಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. 2009–10ನೇ ಸಾಲಿನಲ್ಲಿ ರೂ.108.13 ಲಕ್ಷಗಳ ವಾರ್ಷಿಕ ಹಂಚಿಕೆ ನೀಡಿದ್ದು, ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಹಣ ಬಿಡುಗಡೆಯಾಗಿರುತ್ತದೆ. ಇದರಲ್ಲಿ 30592 ಫಲಾನುಭವಿಗಳಿಗೆ ರೂ.107.14 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

8) **2406–01–102–2–81–423 ಗಿರಿಜನ ಉಪಯೋಜನೆ:–**

2009–10ನೇ ಸಾಲಿನಲ್ಲಿ ಪುನ: ಪ್ರಸ್ತುತ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಬಿದಿರು ಹಾಗೂ ಬೆತ್ತವನ್ನು ಗಿರಿಜನ ಕುಶಲಕರ್ಮಿಗಳಿಗೆ ವಿತರಿಸುವುದರ ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸಲು ಕ್ರಮಕೈಗೊಳ್ಳಲಾಗಿದೆ. 2009–10ನೇ ಸಾಲಿನಲ್ಲಿ ರೂ.44.44 ಲಕ್ಷಗಳ ವಾರ್ಷಿಕ ಹಂಚಿಕೆ ನೀಡಿದ್ದು, ಮಾರ್ಚ್–2010ರ ಅಂತ್ಯಕ್ಕೆ ಪೂರ್ಣ ಪ್ರಮಾಣದ ಹಣ ಬಿಡುಗಡೆಯಾಗಿರುತ್ತದೆ. ಇದರಲ್ಲಿ 4892 ಫಲಾನುಭವಿಗಳಿಗೆ ರೂ.44.44 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## III. ಕೇಂದ್ರ ಪುರಸ್ಕೃತ ಯೋಜನೆಗಳು:–

### (ಅ) ಅರಣ್ಯಾಭಿವೃದ್ಧಿ ಸಂಸ್ಥೆ ಮುಖಾಂತರ ರಾಷ್ಟ್ರೀಯ ಅರಣ್ಯೀಕರಣ ಯೋಜನೆ (NAP-FDA):

9ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುತ್ತಿದ್ದ ಕೇಂದ್ರ ಸರ್ಕಾರದ ಎಲ್ಲಾ ಯೋಜನೆಯಗಳನ್ನು ವಿಲೀನಗೊಳಿಸಿ ಈ

ಯೋಜನೆಯನ್ನು ರೂಪಿಸಲಾಯಿತು. ಸದರಿ ಯೋಜನೆಯನ್ನು ಅರಣ್ಯ ಅಭಿವೃದ್ಧಿ ಸಂಸ್ಥೆ ಹಾಗೂ ಗ್ರಾಮ ಅರಣ್ಯ ಸಮಿತಿ ಮೂಲಕ ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ರಾಜ್ಯದ ಎಲ್ಲಾ ಪ್ರಾದೇಶಿಕ ವಿಭಾಗಗಳಲ್ಲಿ ಅನುಷ್ಠಾನಗೊಂಡಿದ್ದು Societies Registraton Act ರೀತ್ಯ ಇದು ಒಂದು ನೋಂದಾಯಿತ ಸಂಸ್ಥೆಯಾಗಿರುತ್ತದೆ. ಮೂಲ ಹಂತದಲ್ಲಿಯೇ ಜನರ ಸಹಭಾಗಿತ್ವವನ್ನು ಕಲ್ಪಿಸುವುದು ಮತ್ತು ಅವರುಗಳನ್ನು ಸಬಲೀಕರಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಪ್ರಸ್ತುತ ರಾಜ್ಯದ 45 ಅರಣ್ಯ ವಿಭಾಗಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2009–10ನೇ ಸಾಲಿನಲ್ಲಿ ಮಾರ್ಚ್–2010ರ ಅಂತ್ಯದ ವರೆಗೆ ರೂ.1615.70 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಅದರಲ್ಲಿ ರೂ.1194.56 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ರೂ.1147.499 ಲಕ್ಷಗಳನ್ನು 4967ಹೆ. ನೆಡುತೋಪು ನಿರ್ಮಾಣ ಹಾಗೂ 69633ಹೆ. ಹಳೆಯ ನೆಡುತೋಪುಗಳ ನಿರ್ವಹಣೆ ಮಾಡಲಾಗಿದೆ.

**(ಆ) ರಾಷ್ಟ್ರೀಯ ಬೊಂಬು ಮಿಷನ್:–**

ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಬೊಂಬು ಮಿಷನ್‌ರವರ ಸಹಕಾರದೊಂದಿಗೆ ಬೊಂಬು ನೆಡುತೋಪನ್ನು ಬೆಳೆಸಲು ಹಾಗೂ ಅಭಿವೃದ್ಧಿಗೊಳಿಸಲು "ಹಸಿರು ಸಿರಿ" ಎಂಬ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು 2007–08ನೇ ಸಾಲಿನಿಂದ 2011–12ನೇ ಸಾಲಿನ ವರೆಗೆ ಒಟ್ಟು 5 ವರ್ಷ ಯೋಜನೆಯಾಗಿದೆ. ಇದಕ್ಕಾಗಿ ಒಟ್ಟು ರೂ.13233.284 ಲಕ್ಷಗಳ ಪ್ರಸ್ತಾವನೆಯನ್ನು ಸದರಿ ಮಿಷನ್‌ಗೆ ಸಲ್ಲಿಸಲಾಗಿದೆ.

2009–10ನೇ ಸಾಲಿನಲ್ಲಿ 710 ಹೆ. ಬೊಂಬು ನೆಡುತೋಪು ಅಭಿವೃದ್ಧಿ ಪಡಿಸಲು ಒಟ್ಟು ರೂ.415.00 ಲಕ್ಷಗಳಿಗೆ ರಾಷ್ಟ್ರೀಯ ಬೊಂಬು ಮಿಷನ್‌ರವರು ಅನುಮೋದನೆ ನೀಡಿದ್ದು, ಮಾರ್ಚ್–2010ರ ಅಂತ್ಯಕ್ಕೆ ರೂ.323.07ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪೂರ್ಣ ಹಣವನ್ನು ವಿನಿಯೋಗಿಸಿ 710ಹೆ. ಪ್ರದೇಶದಲ್ಲಿ ಬಿದಿರು ನೆಡುತೋಪು ಬೆಳೆಸುವುದರ

ಜೊತೆಗೆ 200ಹೆ. ಪ್ರದೇಶದ ಹಳೆಯ ನೆಡುತೋಪುಗಳ ನಿರ್ವಹಣೆ ಮಾಡಲಾಗಿದೆ.

ಇ) <u>**ಕಾಂಡ್ಲವನ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆ:–**</u>

ರಾಜ್ಯದ ಸಮುದ್ರದ ತೀರ ಮತ್ತು ಕರಾವಳಿ ಪ್ರದೇಶಗಳಲ್ಲಿನ ಸವಕಳಿ ನಿಯಂತ್ರಿಸಿ, ಸಮುದ್ರದ ಕೊರೆತವನ್ನು ತಡೆಯುವುದು, ಪ್ರಕೃತಿ ವಿಕೋಪದಿಂದ ಉಂಟಾಗುವ ನೆರೆಹಾವಳಿ ತಡೆಗೆ ಕಾಂಡ್ಲವನ ನೆಡುತೋಪು ನಿರ್ಮಾಣ, ಹಳೆಯ ಕಾಂಡ್ಲವನ ನೆಡುತೋಪು ನಿರ್ವಹಣೆ ಮತ್ತು ಸಾರ್ವಜನಿಕರಿಗೆ ಕಾಂಡ್ಲವನ ಅರಣ್ಯಗಳ ಬಗ್ಗೆ ಅರಿವು ಮೂಡಿಸುವ ಬಗ್ಗೆ ತರಬೇತಿ, ಪ್ರಚಾರ ಕೆಲಸಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. 2009–10ನೇ ಸಾಲಿಗೆ ಮಂಗಳೂರು, ಹೊನ್ನಾವರ ಕುಂದಾಪುರ ಮತ್ತು ಕಾರವಾರ ವಿಭಾಗಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು **ರೂ.150.00** ಲಕ್ಷಗಳ ಅಂದಾಜು ವೆಚ್ಚಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಪೈಕಿ ಹೊನ್ನಾವರ ವಿಭಾಗಕ್ಕೆ ಸಂಬಂಧಿಸಿದಂತೆ ಮಾರ್ಚ್–2010ರ ಅಂತಿಮ ಹಂತದಲ್ಲಿ ರೂ.15.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಖಜಾನೆಯ ಗಣಕೀಕರಣದ ಅಡಚಣೆಯಿಂದಾಗಿ ರೂ.15.00ಲಕ್ಷಗಳನ್ನು ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಸದರಿ ಮೊತ್ತದ ಪುನರ್ ಮೌಲ್ಯೀಕರಣ (revalidation) ಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ಈ) **Development of Tree Borne Oil Seeds Programme (NOVOD):-**

ಈ ಯೋಜನೆಯಡಿ 2009–10ನೇ ಸಾಲಿನಲ್ಲಿ ಪಂಜಾಬ್‌ರಾಜ್ಯದ ಗುರ್‌ಗಾವ್‌ನ ನವೋಡ್ ಮಂಡಳಿಯ ಆರ್ಥಿಕ ಸಹಾಯದೊಂದಿಗೆ ಎಣ್ಣೆ ಬೀಜೋತ್ಪಾನೆಗಳಾದ ಸೀಮಾರೋಬ ಮತ್ತು ಕಾರಂಜ ನೆಡುತೋಪುಗಳನ್ನು ನಿರ್ಮಾಣ ಮಾಡಲು ರೂ.58.00 ಲಕ್ಷಗಳ ಅನುದಾನ ನಿಗಧಿ ಪಡಿಸಿದ್ದು, ಈಗಾಗಲೇ ರೂ.29.00 ಲಕ್ಷ ಬಿಡುಗಡೆಯಾಗಿದೆ. ಈ ಯೋಜನೆಯಡಿ

ಈಗಾಗಲೇ ಸುಮಾರು 400ಹೆ. ಪ್ರದೇಶದಲ್ಲಿ ಎಣ್ಣೆ ಅಭಿವೃದ್ಧಿ ನೆಡುತೋಪು ಬೆಳೆಸಲಾಗಿದೆ.

**ಉ) ಗ್ರಾಂಟ್ ಇನ್ ಏಯ್ಡ್ ಫಾರ್ ಗ್ರೀನಿಂಗ ಇಂಡಿಯಾ ಯೋಜನೆ :-**

ದೇಶದ ವೃಕ್ಷ ಹೊದಿಕೆ (Tree cover)ಯನ್ನು ಹೆಚ್ಚಿಸುವ ಸಲುವಾಗಿ, ಸರ್ಕಾರಿ ಹಾಗೂ ಖಾಸಗಿ ಪ್ರದೇಶಗಳನ್ನು ಅರಣ್ಯೀಕರಣಗೊಳಿಸುವ ಚಟುವಟಿಕೆಯಲ್ಲಿ ಸರ್ಕಾರದ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಭಾಗವಹಿಸಿಕೆಯನ್ನು ಉತ್ತೇಜಿಸಲು ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಜನರ ಸಹಭಾಗಿತ್ವದ ಮೂಲಕ ಉತ್ತಮ ಗುಣಮಟ್ಟದ ನೆಡುತೋಪು ಸಾಮಗ್ರಿಗಳನ್ನು ಬಳಸಿ ಅರಣ್ಯೀಕರಣ ಉತ್ಪನ್ನವನ್ನು ಹೆಚ್ಚಿಸುವುದು ಹಾಗೂ ಈ ಬಗ್ಗೆ ಅರಿವು ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಸಂಬಂಧ ಅರಣ್ಯ ಪರಿಸರ ಮಂತ್ರಾಲಯದಿಂದ ವಿವಿಧ ಏಜೆನ್ಸಿಗಳಿಂದ ವಿವಿಧ ನಮೂನೆಯ ಪ್ರದೇಶಗಳಲ್ಲಿ ಅರಣ್ಯೀಕರಣ ಕಾರ್ಯಕ್ರಮಗಳನ್ನು, ಹೈಟೆಕ್ ನರ್ಸರಿ ಸ್ಥಾಪನೆ ಮತ್ತು ಸಟಲೇಟ್ ನರ್ಸರಿ ಸ್ಥಾಪನೆ ಕುರಿತು ಪ್ರಸ್ತಾವನೆಗಳನ್ನು ಆಹ್ವಾನಿಸಲಾಗುತ್ತದೆ.

2009-10ನೇ ಸಾಲಿನಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವುದೇ ಹೊಸ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿರುವುದಿಲ್ಲ. ಪ್ರಸ್ತುತ 2003-04 ರಿಂದ 2007-08ನೇ ಸಾಲಿನ ವರೆಗೆ ಒಟ್ಟು 16 ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಅರಣ್ಯೀಕರಣಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕೇಂದ್ರ ಸರ್ಕಾರದ ಆದೇಶದಂತೆ ಸದರಿ ಸಂಸ್ಥೆಗಳು ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ವರದಿ, ಬಳಕೆ ಪ್ರಮಾಣ ಪತ್ರ, ಮೌಲ್ಯಮಾಪನ ವರದಿ, ಇತ್ಯಾಧಿ ವಿವರಗಳನ್ನು ಸಂಬಂಧಪಟ್ಟ ವಿಭಾಗಗಳಿಂದ ಪಡೆದು ಸಲ್ಲಿಸಲಾಗುತ್ತಿದೆ ಈ ಯೋಜನಾ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಬಾಕಿ ಹಣವನ್ನು ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಲಾಗಿದೆ. ಆದರೆ ಮಾರ್ಚ್-2010ರ ಅಂತ್ಯಕ್ಕೆ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

## 7. ಯೋಜನೆಗಳು

### ವಿದೇಶೀ ನೆರವಿನ ಯೋಜನೆ

ಜೆಐಸಿಎ ನೆರವಿನ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಯೋಜನೆಯನ್ನು 2005–06 ರಿಂದ 2012–13 ನೇ ಸಾಲಿನವರೆಗೆ ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಜೆಐಸಿಎ ಮತ್ತು ಕರ್ನಾಟಕ ಸರ್ಕಾರಗಳ ಮಧ್ಯೆ ದಿನಾಂಕ 05–11–2004 ರಂದು ನಡೆದ ಚರ್ಚೆಯ ನಡವಳಿ ಮತ್ತು ದಿನಾಂಕ:31–03–2005 ರ ಸಾಲದ ಕರಾರು ಪತ್ರದ ಒಪ್ಪಂದದ ಮೇರೆಗೆ ಈ ಯೋಜನೆಗೆ ನಿಗಧಿಪಡಿಸಿದ ಒಟ್ಟು ಆರ್ಥಿಕ ಗುರಿ ರೂ. 745.00 ಕೋಟಿಗಳು. ಈ ಮೊತ್ತದಲ್ಲಿ ಜೆಬಿಐಸಿಯಿಂದ ಮರುಪಾವತಿಯಾಗುವ ಮೊತ್ತ ರೂ. 613.266 ಕೋಟಿಗಳಾಗಿರುತ್ತವೆ. ಈ ಪೈಕಿ ರಾಜ್ಯದ ಪಾಲು ರೂ. 131.734 ಕೋಟಿಗಳು. ಈ ಯೋಜನೆಯನ್ನು ಎಂಟು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ : ಎಫ್‌ಇಇ–279 ಎಫ್‌ಎಪಿ–2003, ದಿನಾಂಕ 23–05–2005 ರ ಮೂಲಕ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯನ್ನು ಮಳೆಯನ್ನಾಧರಿಸಿ ಭಾಗ ಎ ಮತ್ತು ಭಾಗ ಬಿ ಯನ್ನಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಎ ಭಾಗದಲ್ಲಿ 12 ಜಿಲ್ಲೆಗಳು ಮತ್ತು ಬಿ'ಭಾಗದಲ್ಲಿ 18 ಜಿಲ್ಲೆಗಳು ಒಳಗೊಂಡಿವೆ. ಭಾಗ ಎ ನಲ್ಲಿ ಬೆಳಗಾಂ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಹಾವೇರಿ, ಕೊಡಗು, ಮೈಸೂರು, ಶಿವಮೊಗ್ಗ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಿರುವುದು. ಭಾಗ ಬಿ'ನಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಚಿಕ್ಕಬಳ್ಳಾಪುರ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಗದಗ, ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ಬಿಜಾಪುರ, ಬಾಗಲಕೋಟೆ, ಬೀದರ್, ರಾಯಚೂರು, ಕೋಲಾರ, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳನ್ನೊಳಗೊಂಡರುತ್ತದೆ. ಯೋಜನೆಯ ಭಾಗ ಎ'ಜಿಲ್ಲೆಗಳಲ್ಲಿ 1,29,000 ಹೆಕ್ಟೇರ್ ಹಾಗೂ ಭಾಗ ಬಿ'ಜಿಲ್ಲೆಗಳಲ್ಲಿ 56,000 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು

ಉದ್ದೇಶಿಸಲಾಗಿದೆ. ಅರಣ್ಯೀಕರಣ, ಭೂ ಸಾರ ಸಂರಕ್ಷಣೆ, ಕೃಷಿ ಅರಣ್ಯ, ಜೀವಿ ವೈವಿಧ್ಯ ಸಂರಕ್ಷಣೆ, ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ, ಮೂಲಭೂತ ಸೌಕರ್ಯ ಒದಗಿಸುವಿಕೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇತ್ಯಾದಿಗಳು ಈ ಯೋಜನೆಯ ಪ್ರಮುಖ ಚಟುವಟಿಕೆಗಳಾಗಿರುತ್ತವೆ.

| ಕ್ರ ಸಂ | **ಕಾರ್ಯಕ್ರಮಗಳು** | **ಗುರಿ** | |
|---|---|---|---|
| **1** | **2** | **3** | **4** |
| **1** | ಅರಣ್ಯೀಕರಣ (ಮಾದರಿ 1–7) | ಹೆ. | 1,85,000 |
| | **ಕೃಷಿ ಅರಣ್ಯ** | | |
| ಎ | ಪ್ರಾತ್ಯಕ್ಷಿಕೆ ಪ್ಲಾಟ್‌ಗಳ ನಿರ್ಮಾಣ | ಹೆ. | 2,150 |
| ಬಿ | ಬೀಜಗಳ ವಿತರಣೆ | ಟನ್ | 500 |
| ಸಿ | ಸಸಿಗಳ ವಿತರಣೆ (8X12 & 5X8) | ಕೋಟಿ | 7.60 |
| **2** | **ಬಡತನ ನಿರ್ಮೂಲನೆಗಾಗಿ ಆದಾಯ ಉತ್ಪತ್ತಿ ಚಟುವಟಿಕೆಗಳು** | | |
| ಎ | ಗ್ರಾಮ ಅರಣ್ಯ ಸಮಿತಿಗಳ ರಚನೆ | ಸಂಖ್ಯೆ | 1,200 |
| ಬಿ | ಸ್ವಸಹಾಯ ಸಂಘಗಳ ರಚನೆ | ಸಂಖ್ಯೆ | 6000 |
| ಸಿ | ಜೆಎಫ್‌ಪಿಎಂ ಫೆಸಿಲಿಟೇಟರ್ಸ್ | ಸಂಖ್ಯೆ | 66 |
| **3** | **ರಕ್ಷಿತ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ** | | |
| ಎ | ಬೆಂಕಿ ರಕ್ಷಣೆ ರಚನೆ | ಕಿ.ಮೀ. | 2,206 |
| ಬಿ | ಹ್ಯಾಬಿಟಾಟ್ ಇಂಪ್ರೂವ್‌ಮೆಂಟ್ | ಹೆ | 3750 |
| **4** | **ಪರಿಸರ ಅಭಿವೃದ್ಧಿ ಚಟುವಟಿಕೆಗಳು** | | |
| ಎ | ವ್ಯಾಕ್ಸಿನೇಷನ್, ಫಾಡರ್ ಡೆವೆಲಪ್‌ಮೆಂಟ್ ಇತರೆ | ಸಂಖ್ಯೆ | 665 |
| ಬಿ | ಆನೆ ತಡೆ ಕಂದಕ ನಿರ್ಮಾಣ | ಕಿ.ಮೀ. | 375 |
| ಸಿ | ಆನೆ ತಡೆ ಕಂದಕಗಳ ನಿರ್ವಹಣೆ | ಕಿಮೀ | 400 |
| ಡಿ | ಪರಿಸರಾಭಿವೃದ್ಧಿ ಸಮಿತಿಗಳ ರಚನೆ | ಸಂಖ್ಯೆ | 73 |
| **5** | **ಮೂಲಭೂತ ಸೌಕರ್ಯಗಳ ಒದಗಿಸುವಿಕೆ** | | |
| ಎ | ವಾಹನಗಳು | ಸಂಖ್ಯೆ | 100 |
| ಬಿ | ಗಣಕ ಯಂತ್ರಗಳು | ಸಂಖ್ಯೆ | 370 |
| ಸಿ | ದೂರವಾಣಿಗಳು | ಸಂಖ್ಯೆ | 223 |
| ಡಿ | ಇಂಟರ್‌ನೆಟ್ ಜಾಲ ಅಭಿವೃದ್ಧಿ | ಸಂಖ್ಯೆ | 35 |

| ಕ್ರ ಸಂ | ಕಾರ್ಯಕ್ರಮಗಳು | ಗುರಿ | |
|---|---|---|---|
| 1 | 2 | 3 | 4 |
| **6** | **ಕಟ್ಟಡಗಳು** | | |
| ಎ | ವಸತಿ ಕಟ್ಟಡಗಳು | ಸಂಖ್ಯೆ | 72 |
| ಬಿ | ವಸತಿಯೇತರ ಕಟ್ಟಡಗಳು | ಸಂಖ್ಯೆ | 23 |
| ಸಿ | ಕಛೇರಿ ಉಪಕರಣಗಳು | ಸಂಖ್ಯೆ | 116 |
| **7** | **ಅರಣ್ಯ ನಿರ್ವಹಣೆಯ ಬೆಂಬಲಿತ ಚಟುವಟಿಕೆಗಳು** | | |
| | ತಾಂತ್ರಿಕ ಕಾರ್ಯಗಾರಗಳ ಏರ್ಪಡಿಸುವಿಕೆ | | |
| ಎ | ಕೇಂದ್ರ ಕಛೇರಿಯಲ್ಲಿ | ಸಂಖ್ಯೆ | 5 |
| ಬಿ | ವೃತ್ತ ಮತ್ತು ವಿಭಾಗ ಮಟ್ಟದಲ್ಲಿ | ಸಂಖ್ಯೆ | 15 |
| **8** | **ಸಂಶೋಧನಾ ಕಾಮಗಾರಿಗಳು** | ಹೆ. | 5,400 |
| | **ತರಬೇತಿ ನಿರ್ವಹಣೆ** | | |
| ಎ | ಗ್ರಾಮ ಅರಣ್ಯ ಸಮಿತಿ ಸದಸ್ಯರು, ಸ್ವಸಹಾಯ ತಂಡಗಳ ಸದಸ್ಯರು ಹಾಗೂ ಇಲಾಖಾ ಸಿಬ್ಬಂದಿಗೆ | ತರಬೇತಿಗಳು | 1,551 |
| ಬಿ | ಇಲಾಖಾ ಹಿರಿಯ ಅಧಿಕಾರಿಗಳಿಗೆ ಹೊರ ರಾಜ್ಯದಲ್ಲಿ ತರಬೇತಿ | ಜನ ಅಧಿಕಾರಿಗಳು | 800 |
| ಸಿ | ವಿದೇಶೀ ತರಬೇತಿ | ಜನ ಅಧಿಕಾರಿಗಳು | 54 |
| **9** | **ಸಮಾಲೋಚನೆ** | | |
| ಎ | ಜಂಟಿ ಅರಣ್ಯ ಯೋಜನೆ, ನಿರ್ವಹಣೆ, ಜೀವಿ ವೈವಿಧ್ಯ ಸಂರಕ್ಷಣೆ ಮತ್ತು ಮೌಲ್ಯಮಾಪನ ಹಾಗೂ ಪರಿಶೀಲನೆ | ಸಂಖ್ಯೆ | 19 |
| 10 | **ಕಛೇರಿ ವೆಚ್ಚ, ದುರಸ್ತಿ ಮತ್ತು ನಿರ್ವಹಣೆ** | | |
| | ಕಛೇರಿ ವೆಚ್ಚ | ಸಂಖ್ಯೆ | 250 |
| | ಇಂಧನ ವೆಚ್ಚ | ಸಂಖ್ಯೆ | 640 |
| | ಪ್ರಯಾಣ ವೆಚ್ಚ | ಸಂಖ್ಯೆ | 320 |
| | ದುರಸ್ತಿ | ಸಂಖ್ಯೆ | 80 |
| | ಕಟ್ಟಡ ನಿರ್ವಹಣೆ | ಸಂಖ್ಯೆ | 1000 |
| 11 | **ಸಿಬ್ಬಂದಿ ವೇತನ** (ಹಿಂಬಾಕಿ ಮತ್ತು ಅರಣ್ಯ ಪ್ರೇರಕರ ಗೌರವಧನ ಸೇರಿ) | ಸಂಖ್ಯೆ | 2053 |

2009–10 ನೇ ಸಾಲಿಗೆ ವಿಶೇಷ ಅಧಿಕಾರಸ್ಥ ಸಮಿತಿಯು ಅನುಮೋದಿಸಿದ ಯೋಜನಾ ಕಾರ್ಯಕ್ರಮದ ಮೊತ್ತ ರೂ.137.00 ಕೋಟಿ ಹಾಗೂ ಹಿಂಬಾಕಿ ಮೊತ್ತ ರೂ.24.656 ಕೋಟಿಗಳಾಗಿದ್ದು, ಈ ಮೊತ್ತಗಳಲ್ಲಿ ಮಾರ್ಚ್–2010ರ ಅಂತ್ಯದ ವರೆಗೆ ರೂ.161.656 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ರೂ.158.484 ಕೋಟಿಗಳನ್ನು ವೆಚ್ಚಮಾಡಲಾಗಿದೆ. ಜೆಐಸಿಎ ಸಂಸ್ಥೆಗೆ ರೂ.125.398 ಕೋಟಿಗಳನ್ನು ಮರುಪಾವತಿಗಾಗಿ ಸಲ್ಲಿಸಲಾಗಿದೆ.

ಎ. 2009–10 ನೇ ಸಾಲಿನಲ್ಲಿ ಜೆಐಸಿಎ ನೆರವಿನ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆಯಡಿ ಸಾಧಿಸಿದ ಭೌತಿಕ ಪ್ರಗತಿ ಈ ಕೆಳಕಂಡಂತಿದೆ.

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| I | ಅರಣ್ಯೀಕರಣ | | | |
| 1 | **ಮಾದರಿ–1, ನೈಸರ್ಗಿಕ ಪುನರ್ ಉತ್ಪತ್ತಿ** | | | |
| | ಮೂರನೇ ವರ್ಷದ ನಿರ್ವಹಣೆ | ಹೆ. | 6040 | 6040 |
| | ಎರಡನೇ ವರ್ಷದ ನಿರ್ವಹಣೆ | ಹೆ. | 4960 | 4960 |
| | ಒಂದನೇ ವರ್ಷದ ನಿರ್ವಹಣೆ | ಹೆ. | 6050 | 6050 |
| | ಮಾನ್‌ಸೂನ್ ನೆಡುತೋಪು ನಿರ್ಮಾಣ | ಹೆ. | 8386 | 8386 |
| 2 | **ಮಾದರಿ–2 ನೈಸರ್ಗಿಕ ಪುನರ್ ಉತ್ಪತ್ತಿಗೆ ನೆರವು** | | | |
| | ಎರಡನೇ ವರ್ಷದ ನಿರ್ವಹಣೆ | ಹೆ. | 4620 | 4620 |
| | ಒಂದನೇ ವರ್ಷದ ನಿರ್ವಹಣೆ | ಹೆ. | 14665 | 14665 |
| | ನೆಡುತೋಪು ನಿರ್ಮಾಣ | ಹೆ. | 16569 | 16569 |
| | ಮುಂಗಡ ಕಾಮಗಾರಿ | ಹೆ. | 15780 | 15780 |
| 3 | **ಮಾದರಿ–3, ಚೌಬೀನೆ ನೆಡುತೋಪುಗಳು** | | | |
| | ಮೂರನೇ ವರ್ಷದ ನಿರ್ವಹಣೆ | ಹೆ. | 25 | 25 |
| | ಎರಡನೇ ವರ್ಷದ ನಿರ್ವಹಣೆ | ಹೆ. | 7883 | 7883 |
| | ಒಂದನೇ ವರ್ಷದ ನಿರ್ವಹಣೆ | ಹೆ. | 6287 | 6287 |
| | ನೆಡುತೋಪು ನಿರ್ಮಾಣ | ಹೆ. | 5955 | 5955 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ಮುಂಗಡ ಕಾಮಗಾರಿ | ಹೆ. | 6270 | 6270 |
| 4 | **ಮಾದರಿ–4, ಉರುವಲು ಮತ್ತು ಸಣ್ಣ ಚೌಬೀನೆ ನೆಡುತೋಪುಗಳು ಬೆಳೆಸುವುದು** | | | |
| | ಮೂರನೇ ವರ್ಷದ ನಿರ್ವಹಣೆ | ಹೆ. | 13615 | 13615 |
| | ಎರಡನೇ ವರ್ಷದ ನಿರ್ವಹಣೆ | ಹೆ. | 8409 | 8409 |
| | ಒಂದನೇ ವರ್ಷದ ನಿರ್ವಹಣೆ | ಹೆ. | 7363 | 7363 |
| | ನೆಡುತೋಪು ನಿರ್ಮಾಣ | ಹೆ. | 8653 | 8653 |
| | ಮುಂಗಡ ಕಾಮಗಾರಿ | ಹೆ. | 13481 | 13481 |
| 5 | **ಮಾದರಿ–5, ಚೌಬೀನೇತರ ಅರಣ್ಯ ಉತ್ಪನ್ನಗಳ ನೆಡುತೋಪುಗಳು–** | | | |
| | ಎರಡನೇ ವರ್ಷದ ನಿರ್ವಹಣೆ | ಹೆ. | 5950 | 5950 |
| | ಒಂದನೇ ವರ್ಷದ ನಿರ್ವಹಣೆ | ಹೆ. | 6075 | 6075 |
| | ನೆಡುತೋಪು ನಿರ್ಮಾಣ | ಹೆ. | 6075 | 6075 |
| 6 | **ಮಾದರಿ–6, ಶಾಲಾವನಗಳು** | | | |
| | 1ನೇ ವರ್ಷದ ನಿರ್ವಹಣೆ | ಹೆ. | 698 | 698 |
| | ನೆಡುತೋಪು ನಿರ್ಮಾಣ | ಹೆ. | 500 | 478 |
| | ಮುಂಗಡ ಕಾಮಗಾರಿ | ಹೆ. | 512 | 512 |
| | ಸಿಎಫ್‌ಪಿಕೆ–ಕಾರ್ಯಕ್ರಮ | ಎಕರೆ | 121 | 131 |
| 7 | **ಮಾದರಿ7, ಕಾಂಡ್ಲ ವನ ಅಭಿವೃದ್ಧಿ** | | | |
| | 1ನೇ ವರ್ಷದ ನೆಡುತೋಪು ನಿರ್ವಹಣೆ | ಹೆ. | 430 | 430 |
| | ಮಾನ್‌ಸೂನ್ ನೆಡುತೋಪು ನಿರ್ಮಾಣ | ಹೆ | 285 | 285 |
| 8 | **ಮಾದರಿ–8, ಕೃಷಿ ಅರಣ್ಯ ಕಾರ್ಯಕ್ರಮಗಳು** | | | |
| | ಕಾರ್ಯಗಾರ/ಚರ್ಚೆ/ಸಮ್ಮೇಳನ (ಕೃಷಿ ಅರಣ್ಯಕ್ಕೆ ಸಂಬಂಧಿಸಿದಂತೆ) | ಸಂ. | 10 | – |
| | ಯಶಸ್ವಿ ರೈತರಿಗೆ ಬಹುಮಾನ ಇತರೆ | ಸಂ. | 200 | 96 |
| **9** | **ಮಣ್ಣು ಮತ್ತು ನೀರು ಸಂರಕ್ಷಣೆ ಕಾಮಗಾರಿಗಳು** | | | |
| | ಮಾದರಿ–1, ಮಳೆಗಾಲದ | ಹೆ | 8386 | 8386 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ಕೆಲಸದಿಂದ ಪರಿಸರ ಅಭಿವೃದ್ಧಿ ಮತ್ತು ನೈಸರ್ಗಿಕ ಅಭಿವೃದ್ಧಿ | | | |
| | ಮಾದರಿ–2, ನೈಸರ್ಗಿಕ ಪುನರುತ್ಪತ್ತಿ | ಹೆ | 15780 | 15780 |
| | ಮಾದರಿ–3, ಚೌಬೀನೆ ನೆಡುತೋಪು | ಹೆ. | 6270 | 6270 |
| | ಮಾದರಿ–4, ಉರುವಲು ಸೌದೆ ಮತ್ತು ಸಣ್ಣ ಚೌಬೀನೆ ನೆಡುತೋಪು–ಮುಂಗಡ ಕೆಲಸ | ಹೆ | 13481 | 13481 |
| **II** | **ರಕ್ಷಿತಅರಣ್ಯ ಪ್ರದೇಶಗಳ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ** | | | |
| | ಹೊಸ ಬೆಂಕಿ ಸಾಲುಗಳ ನಿರ್ಮಾಣ | ಕಿ.ಮೀ | 442 | 469 |
| | ವನ್ಯಜೀವಿ ಆವಾಸ ಸ್ಥಾನಗಳ ಅಭಿವೃದ್ಧಿ | ಹೆ. | 750 | 571 |
| | **ಪರಿಸರ ಅಭಿವೃದ್ಧಿ** | | | |
| | ಹೊಸ ಆನೆ/ಪಶು ನಿರೋಧಕ ಕಂದಕ | ಕಿ.ಮೀ | 50 | 58 |
| | ಹಳೆ ಆನೆ ನಿರೋಧಕ ಕಂದಕಗಳ ನಿರ್ವಹಣೆ | ಕಿ.ಮೀ | 50 | 50 |
| | ಪರಿಸರ ಅಭಿವೃದ್ಧಿ ಸಮಿತಿಗಳ ರಚನೆ | ಸಂಖ್ಯೆ | 10 | 10 |
| **III** | **ಸಹಭಾಗಿತ್ವದೊಂದಿಗೆ ಅರಣ್ಯ ನಿರ್ವಹಣೆ** | | | |
| | ಐಜಿಎ–3ನೇ ಕಂತು–2007–08ರ ಸಾಲಿನ ಗ್ರಾಮ ಅರಣ್ಯ ಸಮಿತಿಗಳು | ಸಂಖ್ಯೆ | 353 | 353 |
| | ಐಜಿಎ–2ನೇ ಕಂತು–2008–09ರ ಸಾಲಿನ ಗ್ರಾಮ ಅರಣ್ಯ ಸಮಿತಿಗಳು | ಸಂಖ್ಯೆ | 23 | 23 |
| | ಜೆಎಫ್‌ಪಿಎಂ ಸಮನ್ವಯಾಧಿಕಾರಿ | ಸಂಖ್ಯೆ | 1 | 1 |
| | ಮುಂಚೂಣಿ ಸರ್ಕಾರೇತರ ಸಂಸ್ಥೆಗಳು | ಸಂಖ್ಯೆ | 5 | 5 |
| | ಜೆಎಫ್‌ಪಿಎಂ ಸುಗಮಗಾರರು | ಸಂಖ್ಯೆ | 66 | 65 |
| **IV** | **ಅರಣ್ಯ ನಿರ್ವಹಣೆಯ ಬೆಂಬಲಿತ ಚಟುವಟಿಕೆಗಳು** | | | |
| | ಅಧ್ಯಯನ/ಕಾರ್ಯಗಾರ | ಸಂಖ್ಯೆ | – | 3 |
| | ಕ್ಲೋನಲ್ ಸೀಡ್ ಆರ್ಚಾರ್ಡ್–3ನೇ | ಹೆ | 78 | 78 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ವರ್ಷದ ನಿರ್ವಹಣೆ | | | |
| | ಕ್ಲೋನಲ್ ಸೀಡ್ ಆರ್ಚಾರ್ಡ್–2ನೇ ವರ್ಷದ ನಿರ್ವಹಣೆ | ಹೆ | 112 | 112 |
| | ಕ್ಲೋನಲ್ ಸೀಡ್ ಆರ್ಚಾರ್ಡ್–1ನೇ ವರ್ಷದ ನಿರ್ವಹಣೆ | ಹೆ | 127 | 127 |
| | ಕ್ಲೋನಲ್ ಸೀಡ್ ಆರ್ಚಾರ್ಡ್‌ಗಳ ಬೆಳೆಸುವಿಕೆ | ಹೆ. | 114 | 114 |
| | ಕ್ಲೋನಲ್ ಸೀಡ್ ಆರ್ಚಾರ್ಡ್‌ಗಳ ಮುಂಗಡ ಕೆಲಸ | ಹೆ. | 29 | 29 |
| | ಸೀಡ್ ಆರ್ಚಾರ್ಡ್‌ಗಳ ಮೂರನೇ ವರ್ಷದ ನಿರ್ವಹಣೆ | ಹೆ. | 52 | 52 |
| | ಸೀಡ್ ಆರ್ಚಾರ್ಡ್‌ಗಳ ಎರಡನೇ ವರ್ಷದ ನಿರ್ವಹಣೆ | ಹೆ | 197 | 197 |
| | ಸೀಡ್ ಆರ್ಚಾರ್ಡ್‌ಗಳ ಒಂದನೇ ವರ್ಷದ ನಿರ್ವಹಣೆ | ಹೆ. | 185 | 185 |
| | ಸೀಡ್ ಆರ್ಚಾರ್ಡ್‌ಗಳ ಬೆಳೆಸುವಿಕೆ | ಹೆ. | 144 | 144 |
| | ಸೀಡ್ ಆರ್ಚಾರ್ಡ್‌ಗಳ ಮುಂಗಡ ಕೆಲಸ | ಹೆ. | 16 | 16 |
| | ಬೀಜೋತ್ಪಾದನೆ ಪ್ರದೇಶಗಳ ಎರಡನೇ ವರ್ಷದ ನಿರ್ವಹಣೆ – ಟೀಕ್ | ಹೆ. | 35 | 35 |
| | ಬೀಜೋತ್ಪಾದನೆ ಪ್ರದೇಶಗಳ ಒಂದನೇ ವರ್ಷದ ನಿರ್ವಹಣೆ– ಟೀಕ್ | ಹೆ. | 129 | 129 |
| | ಬೀಜೋತ್ಪಾದನೆ ಪ್ರದೇಶಗಳ ಎರಡನೇ ವರ್ಷದ ನಿರ್ವಹಣೆ – ನಾನ್ ಟೀಕ್ | ಹೆ. | 300 | 300 |
| | ಬೀಜೋತ್ಪಾದನೆ ಪ್ರದೇಶಗಳ ಒಂದನೇ ವರ್ಷದ ನಿರ್ವಹಣೆ – ನಾನ್ ಟೀಕ್ | ಹೆ. | 368 | 368 |
| | ಮೂರನೇ ವರ್ಷದ ಸಿಎಂಎ / ವಿಎಂಜಿ ನಿರ್ವಹಣೆ | ಹೆ. | 24 | 24 |
| | ಎರಡನೇ ವರ್ಷದ ಸಿಎಂಎ / | ಹೆ. | 160 | 160 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ವಿಎಂಜಿ ನಿರ್ವಹಣೆ | | | |
| | ಒಂದನೇ ವರ್ಷದ ಸಿಎಂಎ / ವಿಎಂಜಿ ನಿರ್ವಹಣೆ | ಹೆ. | 145 | 145 |
| | ಸಿಎಂಎ / ವಿಎಂಜಿ ಬೆಳೆಸುವಿಕೆ | ಹೆ. | 87 | 87 |
| | ಜರ್ಮ್ ಪ್ಲಾಸಮ್ ಬ್ಯಾಂಕ್ ನೆಡುತೋಪು ಕೆಲಸ–2ನೇ ವರ್ಷ | ಹೆ. | 21 | 21 |
| | ಜರ್ಮ್ ಪ್ಲಾಸಮ್ ಬ್ಯಾಂಕ್ ನೆಡುತೋಪು ಕೆಲಸ–1ನೇ ವರ್ಷ | ಹೆ. | 33 | 33 |
| | ಜರ್ಮ್ ಪ್ಲಾಸಮ್ ಬ್ಯಾಂಕ್ ನೆಡುತೋಪು ಕೆಲಸ | ಹೆ | 23 | 23 |
| | ಜರ್ಮ್ ಪ್ಲಾಸಮ್ ಬ್ಯಾಂಕ್ ಮುಂಗಡ ಕೆಲಸ | ಹೆ. | 21 | 21 |
| | ಮೂರನೇ ವರ್ಷದ ಸ್ಪಿಸೀಸ್ ಟ್ರೈಲ್ ಪ್ಲಾಟ್ ಮತ್ತು ಪ್ರೋಜೆನ್ನಿ ಟ್ರೈಲ್ ನಿರ್ವಹಣೆ | ಹೆ. | 8 | 8 |
| | ಎರಡನೇ ವರ್ಷದ ಸ್ಪಿಸೀಸ್ ಟ್ರೈಲ್ ಪ್ಲಾಟ್ ಮತ್ತು ಪ್ರೋಜೆನ್ನಿ ಟ್ರೈಲ್ ನಿರ್ವಹಣೆ | ಹೆ. | 97 | 97 |
| | ಒಂದನೇ ವರ್ಷದ ಸ್ಪಿಸೀಸ್ ಟ್ರೈಲ್ ಪ್ಲಾಟ್ ಮತ್ತು ಪ್ರೋಜೆನ್ನಿ ಟ್ರೈಲ್ ನಿರ್ವಹಣೆ | ಹೆ. | 89 | 89 |
| | ಸ್ಪಿಸೀಸ್ ಟ್ರೈಲ್ ಪ್ಲಾಟ್ ಮತ್ತು ಪ್ರೋಜೆನ್ನಿ ಟ್ರೈಲ್ ಬೆಳೆಸುವಿಕೆ | ಹೆ. | 72 | 72 |
| | **ಸ್ಪಿಸೀಸ್ ಟ್ರೈಲ್ ಪ್ಲಾಟ್ ಮತ್ತು ಪ್ರೋಜೆನ್ನಿ ಟ್ರೈಲ್ ಮುಂಗಡ ಕೆಲಸ** | ಹೆ. | 32 | 32 |
| | ಪ್ಲಸ್ ಟ್ರೀಗಳ ಗುರುತಿಸುವಿಕೆ ಮತ್ತು ನಿರ್ವಹಣೆ | ಹೆ. | 550 | 440 |
| | **ಸಂಶೋಧನಾ ಸಲಕರಣೆಗಳು** | | | |
| | ಬೀಜಾಭಿವೃದ್ಧಿ ಘಟಕಗಳ ಅಭಿವೃದ್ಧಿ | ಸಂ | 4 | 4 |
| | **ಸಂಶೋಧನಾ ಅಧ್ಯಯನಗಳು** | | | |
| | ಎಕಾಲಾಜಿಕಲ್ | ಹೆ. | 2 | – |
| | ಸೋಶಿಯೋ ಎಕನಾಮಿಕ್ | ಹೆ. | 4 | – |
| | ಸಿಲ್ವಿಕಲ್ಚರಲ್ ರೀಸರ್ಚ್ | ಹೆ. | 3 | 3 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ರೀಸರ್ಚ್ ಫೆಲೋಷಿಪ್ | ಹೆ. | 2 | – |
| | ರೀಸರ್ಚ್ ಕಾಂಟ್ರಾಕ್ಟ್ಸ್ | ಹೆ. | 2 | – |
| **V** | **ತರಬೇತಿಗಳು** | | | |
| **1** | **ಸ್ಥಳೀಯ ತರಬೇತಿ** | | | |
| | ಸಮುದಾಯದಿಂದ ಸಮುದಾಯಕ್ಕೆ ತರಬೇತಿ | ಸಂ | 8 | 8 |
| | ಪರಿಸರ ಅಭಿವೃದ್ಧಿ ಸಮಿತಿಗಳ ಸದಸ್ಯರುಗಳಿಗೆ ತರಬೇತಿ | ಸಂ | 73 | 73 |
| | ರಕ್ಷಿತಅರಣ್ಯ ಪ್ರದೇಶದ ಅಧಿಕಾರಿಗಳಿಗೆ ತರಬೇತಿ | ಸಂ. | 1 | 1 |
| | ಗ್ರಾಅಸ & ಎಸ್‌ಹೆಚ್‌ಜಿ ಸದಸ್ಯರುಗಳಿಗೆ In-situ ತರಬೇತಿ 2007–08ನೇ ಸಾಲಿನಲ್ಲಿ ರಚನೆಯಾದ ಗ್ರಾಅಸ ಗಳು | ಸಂ | 353 | 353 |
| | ಗ್ರಾಅಸ & ಎಸ್‌ಹೆಚ್‌ಜಿ ಸದಸ್ಯರುಗಳಿಗೆ In-situ ತರಬೇತಿ 2008–09ನೇ ಸಾಲಿನಲ್ಲಿ ರಚನೆಯಾದ ಗ್ರಾಅಸ ಗಳು | ಸಂ | 23 | 23 |
| | ಸ್ವಯಂಸೇವಕರು ಮತ್ತು ಅರಣ್ಯಪ್ರೇರಕರುಗಳಿಗೆ ತರಬೇತಿ | ಸಂ. | 35 | 35 |
| | ಹಿರಿಯ ಅಧಿಕಾರಿಗಳನ್ನು ತರಬೇತಿಗಾಗಿ ಹೊರ ರಾಜ್ಯಗಳಿಗೆ ಕಳುಹಿಸುವುದು. | ಸಂ. | 80 | 28 |
| | ವಿಎಫ್‌ಸಿ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕರುಗಳಿಗೆ ತರಬೇತಿ | ಸಂ. | 35 | 39 |
| **2** | **ಅರಣ್ಯ ತರಬೇತಿ ಸಂಸ್ಥೆಗಳ ಮೂಲಕ ತರಬೇತಿ** | | | |
| | ಗಣಕಯಂತ್ರ ನೈಪುಣ್ಯತೆ | ಸಂ | 2 | 4 |
| | ಹಣಕಾಸು ನಿರ್ವಹಣೆ | ಸಂ | 2 | 2 |
| | ಮಾನವ ಸಂಪನ್ಮೂಲನಾಭಿವೃದ್ಧಿ (ಹೆಚ್.ಆರ್.ಡಿ) | ಸಂ | 2 | 2 |
| | ವನಪಾಲಕ/ಅರಣ್ಯ ರಕ್ಷಕರು | ಸಂ | 5 | 10 |

| ಕ್ರ ಸಂ | ಚಟುವಟಿಕೆಗಳು | ಘಟಕ | ಭೌತಿಕ | |
|---|---|---|---|---|
| | | | ಗುರಿ | ಸಾಧನೆ |
| 1 | 2 | 3 | 4 | 5 |
| | ವಲಯ ಅರಣ್ಯಾಧಿಕಾರಿಗಳು | ಸಂ. | 2 | 2 |
| | ಅಧಿಕಾರಿಗಳನ್ನು ತರಬೇತಿಗಾಗಿ ನಿಯೋಜಿಸಿರುವುದು (ಸಅಸಂ, ಉಅಸಂ, ಅಸಂ) | ಸಂ | 13 | 13 |
| **3** | **ವಿದೇಶಿ ತರಬೇತಿ** | | | |
| | 2–12 ತಿಂಗಳು | ಸಂಖ್ಯೆ | 13 | 4 |
| **4** | **ಕನ್ಸಲ್ಟೆನ್ಸಿ** | | | |
| | ಜೆಎಫ್‌ಪಿಎಂ | ಸಂ | 2 | 1 |
| | ಉಸ್ತುವಾರಿ ಮತ್ತು ಮೌಲ್ಯಮಾಪನ | ಸಂ | 1 | 1 |
| **VI** | **ಕ್ಷೇತ್ರ ಕಾರ್ಯಕ್ರಮಗಳಿಗೆ ಮೂಲ ಸೌಲಭ್ಯಗಳ ಪೂರೈಕೆ** | | | |
| | ವಾಹನಗಳು | ಸಂಖ್ಯೆ | 25 | 25 |
| | ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಕನೆಕ್ಷನ್ ಇ–ಗವರ್ನೆನ್ಸ್ | ಸಂಖ್ಯೆ | 6 | – |
| | **ಕಟ್ಟಡಗಳು** | | | |
| | ವಸತಿ ಕಟ್ಟಡಗಳು | ಸಂಖ್ಯೆ | 14 | 14 |
| | ವಸತಿಯೇತರ ಕಟ್ಟಡಗಳು | ಸಂಖ್ಯೆ | 4 | 4 |
| | **ತಾಂತ್ರಿಕ ಕಾರ್ಯಾಗಾರಗಳು** | | | |
| | ವೃತ್ತ/ವಿಭಾಗಗಳು | ಸಂಖ್ಯೆ | 1 | 1 |
| | **ಕಛೇರಿ ಯಂತ್ರೋಪಕರಣ** | | | |
| | ಕೇಬಲ್ ಬ್ರಾಡ್ ಬ್ಯಾಂಡ್ ಇಂಟರ್‌ನೆಟ್ ಕನೆಕ್ಷನ್ | ಸಂಖ್ಯೆ | 1 | – |
| **VII** | **ಕಛೇರಿ ವೆಚ್ಚ, ದುರಸ್ತಿ ಮತ್ತು ನಿರ್ವಹಣೆ** | | | |
| | 051–ಕಛೇರಿ ವೆಚ್ಚ | ಸಂಖ್ಯೆ | 30 | 30 |
| | 052–ದೂರವಾಣಿ ವೆಚ್ಚ | ಸಂಖ್ಯೆ | 10 | 10 |
| | 195–ಇಂಧನ ಮತ್ತು ವಾಹನ ದುರಸ್ತಿ | ಸಂಖ್ಯೆ | 80 | 80 |
| | 041–ಪ್ರಯಾಣ ವೆಚ್ಚ | ಸಂಖ್ಯೆ | 40 | 40 |
| | 200–ಕಟ್ಟಡ ನಿರ್ವಹಣೆ | ಸಂಖ್ಯೆ | 200 | 200 |
| | **ಸಿಬ್ಬಂಧಿ ವೇತನ** (ಅರಣ್ಯ ಪ್ರೇರಕರ ಗೌರವಧನ ಸೇರಿ) | ಸಂಖ್ಯೆ | 2053 | 2053 |

## 8. ಕಾರ್ಯಯೋಜನೆಗಳು, ಭೂಮಾಪನಾ ಮತ್ತು ಸೀಮಾ ನಿರ್ಣಯ

ಅರಣ್ಯ ಇಲಾಖೆಯ ಕಾರ್ಯಯೋಜನಾ ಘಟಕವು ವೈಜ್ಞಾನಿಕ ರೀತಿಯಲ್ಲಿ ಕಾರ್ಯಯೋಜನಾ ವರದಿ ತಯಾರಿಸುವುದು ಮತ್ತು ಈ ಯೋಜನೆಗಳ ಕಾರ್ಯಗತವಾಗಿರುವುದರ ಬಗ್ಗೆ ಮೌಲ್ಯ ಮಾಪನ ಮಾಡುವುದಾಗಿದೆ. ಈ ಸಾಲಿನಲ್ಲಿ 39 ವಿಭಾಗಗಳಾದ ಮಂಡ್ಯ, ಬೆಂಗಳೂರು ಗ್ರಾಮಾಂತರ, ರಾಮನಗರ, ಗುಲ್ಬರ್ಗ, ಧಾರವಾಡ, ಬಿಜಾಪುರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬೆಳಗಾವಿ, ಬಾಗಲಕೋಟೆ, ಕುಂದಾಪುರ, ಹಾವೇರಿ, ಕೊಳ್ಳೆಗಾಲ, ಮಡಿಕೇರಿ, ಗದಗ, ಬೀದರ್, ಕೋಲಾರ, ಮಂಗಳೂರು, ಮೈಸೂರು, ಘಟಪ್ರಭಾ, ಬೆಂಗಳೂರು ನಗರ, ಹುಣಸೂರು, ವೀರಾಜಪೇಟೆ, ಚಿಕ್ಕಮಗಳೂರು, ಕೊಪ್ಪ, ತುಮಕೂರು, ಹಾಸನ, ಶಿವಮೊಗ್ಗ, ಯಲ್ಲಾಪುರ, ದಾವಣಗೆರೆ, ಹೊನ್ನಾವರ, ಸಿರಸಿ, ಕಾರವಾರ, ಹಳಿಯಾಳ, ರಾಯಚೂರು, ಬಳ್ಳಾರಿ, ಕೊಪ್ಪಳ, ಸಾಗರ, ಮತ್ತು ಭದ್ರಾವತಿ ಕಾರ್ಯಯೋಜನೆಗಳ ಪರಿಷ್ಕರಣೆಯ ಕಾರ್ಯವು ಈ ಅವಧಿಯಲ್ಲಿ ಪ್ರಾರಂಭಿಸಲಾಗಿದೆ. ಇವುಗಳ ಪೈಕಿ ಈಗಾಗಲೇ 25 ವಿಭಾಗಗಳಾದ ಹಾಸನ, ತುಮಕೂರು, ಕೊಪ್ಪ, ಬೆಂಗಳೂರು ಗ್ರಾಮಾಂತರ, ರಾಮನಗರ, ಹುಣಸೂರು, ಶಿವಮೊಗ್ಗ, ಸಾಗರ, ಬೆಳಗಾವಿ, ಬಾಗಲಕೋಟೆ, ಚಿತ್ರದುರ್ಗ, ಧಾರವಾಡ, ಕುಂದಾಪುರ, ಹಾವೇರಿ, ಕೊಳ್ಳೇಗಾಲ, ಮಡಿಕೇರಿ, ವಿರಾಜಪೇಟೆ, ಮಂಗಳೂರು, ಬೀದರ್, ಭದ್ರಾವತಿ, ಕೋಲಾರ, ಘಟಪ್ರಭಾ, ಗುಲ್ಬರ್ಗ, ಮಂಡ್ಯ ಮತ್ತು ಚಿಕ್ಕಮಗಳೂರು ವಿಭಾಗಗಳ ಪೂರ್ವಭಾವಿ ಕರಡು ಕಾರ್ಯಯೋಜನಾ ವರದಿಗಳಿಗೆ ಅನುಮೋದನೆಯನ್ನು ನೀಡಲಾಗಿದೆ. ಉಳಿದ 14 ವಿಭಾಗಗಳ ಪೂರ್ವಭಾವಿ ಕಾರ್ಯಯೋಜನಾ ವರದಿಗಳು ಪ್ರಗತಿಯಲ್ಲಿರುತ್ತವೆ.

**ಕಾರ್ಯಯೋಜನಾ ಘಟಕಗಳಿಗೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಗಳು:–**

1. ಮೇಲೆ ತಿಳಿಸಿದ 39 ವಿಭಾಗಗಳ ಕಾರ್ಯಯೋಜನೆ ಪರಿಷ್ಕರಣೆ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, 25 ವಿಭಾಗಗಳ ಕರಡು

ಪೂರ್ವಭಾವಿ ಕಾರ್ಯಯೋಜನಾ ವರದಿಗಳಿಗೆ ಅನುಮೋದನೆಯನ್ನು ನೀಡಲಾಗಿದೆ. ಉಳಿದ 14 ವಿಭಾಗಗಳ ಪೂರ್ವಭಾವಿ ಕಾರ್ಯಯೋಜನಾ ವರದಿಗಳು ಪ್ರಗತಿಯಲ್ಲಿರುತ್ತವೆ.

**2. ಮೋಜಣಿ ಮತ್ತು ಗಡಿ ಗುರುತಿಸುವಿಕೆ:–**

- ಖಾಸಗಿ ಭೂಮಾಲೀಕರಿಂದ ಅರಣ್ಯ ಭೂಮಿಯ ಒತ್ತುವರಿ ತಡೆಗಟ್ಟಲು ಹಾಗೂ ಅಮೂಲ್ಯ ಅರಣ್ಯ ಪ್ರದೇಶಗಳನ್ನು ರಕ್ಷಿಸಲು ಮೋಜಣಿ ಮಾಡಿ ಮತ್ತು ಗಡಿ ಗುರ್ತಿಸಿ ಆರ್.ಎಫ್.ಕಲ್ಲುಗಳನ್ನು ನೆಡುವ ಕಾರ್ಯ ಕೈಗೊಳ್ಳಲಾಗುತ್ತಿದೆ.
- ಅರಣ್ಯಗಳ ವೈಜ್ಞಾನಿಕ ನಿರ್ವಹಣೆಗಾಗಿ ಬ್ಲಾಕ್ ಹಾಗೂ ಕಂಪಾರ್ಟಮೆಂಟ್ ಗಡಿ ಗುರುತಿಸಿ ಜಿ.ಐ. ಪ್ಲೇಟ್‌ಗಳನ್ನು ಅಳವಡಿಸಲಾಗುತ್ತಿದೆ.
- ಈ ಕೆಳಗೆ ತಿಳಿಸಲಾಗಿರುವಂತೆ 31–03–2010 ರ ವರೆಗೆ ಆಗಿರುವ ಭೌತಿಕ ಹಾಗೂ ಆರ್ಥಿಕ ಸಾಧನೆಯ ವಿವರ ಅನುಬಂದ–I ರಲ್ಲಿ ನೀಡಲಾಗಿದೆ.

**3. ಮೀಸಲು ಅರಣ್ಯದ ನಿರ್ಣಯ ರಚನೆ:–**

- ಕರ್ನಾಟಕ ಅರಣ್ಯ ಕಾಯ್ದೆ 1963, ಕಲಂ–4 ರ ಅಡಿಯಲ್ಲಿ ರಾಜ್ಯ ಸರ್ಕಾರವು ಸರ್ಕಾರಕ್ಕೆ ಸೇರಿದ ಭೂಮಿಯನ್ನು ಮೀಸಲು ಅರಣ್ಯವನ್ನಾಗಿ ಪರಿವರ್ತಿಸುವ ಅಧಿಕಾರ ಹೊಂದಿರುತ್ತದೆ.
- ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ–17 ರಲ್ಲಿ ತಿಳಿಸಲಾದ ವಿಧಿ ವಿಧಾನಗಳನ್ನು ಅನುಸರಿಸಿ ಸದರಿ ಪ್ರದೇಶಗಳನ್ನು ಮೀಸಲು ಅರಣ್ಯವೆಂದು ಘೋಷಿಸಬಹುದಾಗಿರುತ್ತದೆ.
- ಪ್ರಸಕ್ತ ವರ್ಷದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ–4 ಹಾಗೂ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ–17 ರಡಿ ಸರ್ಕಾರಕ್ಕೆ ಒಟ್ಟು 138 ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ.

- ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ–4 ಹಾಗೂ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ–17 ರಡಿ ಯಾವುದೇ ಅರಣ್ಯ ಪ್ರದೇಶಗಳು ಅಧಿಸೂಚನೆಯಾಗಿರುವುದಿಲ್ಲ.

**4. ದೂರಸಂವೇದಿ ಮತ್ತು ಭೌಗೋಳಿಕ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿ:–**

ಜೆ.ಬಿ.ಐ.ಸಿ ಯೋಜನೆಯಡಿಯಲ್ಲಿ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿದ್ಯ ಸಂರಕ್ಷಣೆ ಯೋಜನೆ, ಹಂತ–II ರಲ್ಲಿ ಕರ್ನಾಟಕ ಅರಣ್ಯ ಇಲಾಖೆಯು ದೂರಸಂವೇದಿ ಮತ್ತು ಭೌಗೋಳಿಕ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಲು ಹಾಗೂ ಅಭಿವೃದ್ಧಿಗೊಳಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಕರ್ನಾಟಕ ಅರಣ್ಯ ಇಲಾಖೆಗಾಗಿ ಅರಣ್ಯ ಭೂಮಿಗಳ ದಾಖಲೆಗಳ ಮಾಹಿತಿ ವ್ಯವಸ್ಥೆಯ ಅಭಿವೃದ್ಧಿ ಹಾಗೂ ಅನುಷ್ಠಾನಗೊಳಿಸುವ ಕಾರ್ಯಕ್ಕೆ ಮನಃ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ್ನು ಕಡಿಮೆ ದರ ಸೂಚಿಸಿದ ಮೆ॥ ಡೆಸ್ ಧೃತಿ ಟೆಕ್ನಾಲಜೀಸ್, ಬೆಂಗಳೂರು ಇವರಿಗೆ ವಹಿಸಲಾಗಿದ್ದು, ಸದರಿ ಕೆಲಸಗಳ ನಿರ್ವಹಣೆಯ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಬೆಂಗಳೂರು ಇವರು ದಿನಾಂಕ: 09–11–2009 ರಂದು ಕರಾರು ಪತ್ರಕ್ಕೆ ಸಹಿ ಮಾಡಿದ್ದು, ದಿನಾಂಕ: 13–11–2009 ರಂದು ಈ ಕಛೇರಿಯಿಂದ ಕಾರ್ಯಾದೇಶವನ್ನು ನೀಡಲಾಗಿದೆ. ಸದರಿ ಕಾರ್ಯಾದೇಶದಂತೆ ಮೆ॥ ಡೆಸ್ ಧೃತಿ ಟೆಕ್ನಾಲಜೀಸ್, ಬೆಂಗಳೂರು ಇವರು ಈಗಾಗಲೇ ಪೂರ್ವಭಾವಿ ಕಾರ್ಯಗಳನ್ನು ಪ್ರಾರಂಭಿಸಿರುತ್ತಾರೆ.

¢£ÁAPÀ: 31-03-2010 gÀ ªÉÄÃgÉUÉ ¨ËwPÀ ªÀÄvÀÄ DyðPÀ ¸ÁzsÀ£É ¸À«ªÀgÀ

(gÀÆ.®PÀUÀ¼À°)

| PÀ. ¸ÀA | ÉPÀ²Ã¶ðPÉ | ªÁ¶ðPÀ UÀÄj | | ©qÀÄUÀqÉAiÀiÁzÀ ºÀt | ¥ÀjµÀÌøvÀ UÀÄj | | ªÀiÁZïð CAvÀåzÀªÀgÉUÉ EgÀÄªÀ ¥ÀUÀw | |
|---|---|---|---|---|---|---|---|---|
| | | ¨ËwPÀ | DyðPÀ | | ¨ËwPÀ | DyðPÀ | ¨ËwPÀ | DyðPÀ |
| 1 | 2 | 3 | 4 | 5 | 6 | 7 | 8 | 9 |
| 1 | 2406-01-101-2-20-CgÀ t å ¸ÀA¥Àw£À gÀPÀëuÉUÉ 12£ÉÃ DyðPÀ DAiÉÆÃUÀzÀ C£ÀÄzÁ£À-200- ¤ªÀðºÀuÉ (AiÉÆÃd£É) | 1131.50 Q.«ÄÃ.(J¸ï.r)<br>9147 Dgï.J¥ï.PÀ®ÄUÀ¼ÀÄ<br>1029 PÉÃgÁ£ï<br>466.00 ¹.¨ËAqÀj<br>3728 f.L.¥ÉÃmï<br>4100 ¸ÁåA¥À ï ¥Ámï<br>500 E£ÉAn ¥Á¬Äamï<br>18 PÁvï ªÀiËAnAUï | 150.00 | 135.00 | 1166.90 Q.«ÄÃ.(J¸ï.r)<br>8677 Dgï.J¥ï.PÀ®ÄUÀ¼ÀÄ<br>299 PÉÃgÁ£ï<br>689 ¹.¨ËAqÀj<br>6531 f.L.¥ÉÃmï<br>467 ¸ÁåA¥À ï ¥Ámï<br>500 E£ÉAn ¥Á¬Äamï<br>18 PÁvï ªÀiËAnAUï | 135.00 | 1166.90 Q.«ÄÃ.(J¸ï.r)<br>8677 Dgï.J¥ï.PÀ®ÄUÀ¼ÀÄ<br>299 PÉÃgÁ£ï<br>689 ¹.¨ËAqÀj<br>6531 f.L.¥ÉÃmï<br>467 ¸ÁåA¥À ï ¥Ámï<br>500 E£ÉAn ¥Á¬Äamï<br>18 PÁvï ªÀiËAnAUï | 135.00 |
| | | PÀ I qÀUÀ¼À zÀÄgÀ¹ | 11.63 | 11.63 | PÀ I qÀUÀ¼À zÀÄgÀ¹ | 11.63 | PÀ I qÀUÀ¼À zÀÄgÀ¹ | 11.63 |
| | | | 161.63 | 146.63 | | 146.63 | | 146.63 |
| 2 | 2406-01-005-0-02- PÁAiÉÆÃ¸ÀA-139-¥ÀzÁ£À PÁªÀÄUÁjUÀ¼ÀÄ (AiÉÆÃd£ÉÃvÀgÀ) | 883.50 Q.«ÄÃ.(J¸ï.r)<br>6369 Dgï.J¥ï.PÀ®ÄUÀ¼ÀÄ<br>1119 PÉÃgÁ£ï<br>439.00 ¹.¨ËAqÀj<br>3933 f.L.¥ÉÃmï<br>3265 ¸ÁåA¥À ï ¥Ámï<br>25 PÁvï ªÀiËAnAUï<br>0.00 ¢£ÀUÀÆ®Ä ¸ÀA¨ÁªÀ£É | 155.12 | 155.12 | 1115.50 Q.«ÄÃ.(J¸ï.r)<br>8159 Dgï.J¥ï.PÀ®ÄUÀ¼ÀÄ<br>322 PÉÃgÁ£ï<br>536.72 ¹.¨ËAqÀj<br>4803 f.L.¥ÉÃmï<br>1583 ¸ÁåA¥À ï ¥Ámï<br>25 PÁvï ªÀiËAnAUï<br>0.00 ¢£ÀUÀÆ®Ä ¸ÀA¨ÁªÀ£É | 155.12 | 1115.50 Q.«ÄÃ.(J¸ï.r)<br>8159 Dgï.J¥ï.PÀ®ÄUÀ¼ÀÄ<br>322 PÉÃgÁ£ï<br>536.72 ¹.¨ËAqÀj<br>4803 f.L.¥ÉÃmï<br>1583 ¸ÁåA¥À ï ¥Ámï<br>25 PÁvï ªÀiËAnAUï<br>0.00 ¢£ÀUÀÆ®Ä ¸ÀA¨ÁªÀ£É | 155.12 |
| 3 | 2406-01-005-0-02- PÁAiÉÆÃ¸ÀA-139-¥ÀzÁ£À PÁªÀÄUÁjUÀ¼ÀÄ (AiÉÆÃd£É) | 231.60 Q.«ÄÃ.(J¸ï.r)<br>1477 Dgï.J¥ï.PÀ®ÄUÀ¼ÀÄ<br>21.00 ¹.¨ËAqÀj<br>168 f.L.¥ÉÃmï<br>433 ¸ÁåA¥À ï ¥Ámï<br>195 PÉÃgÁ£ï<br>7 PÁvï ªÀiËAnAUï | 21.00 | 21.00 | 255.70 Q.«ÄÃ.(J¸ï.r)<br>1623 Dgï.J¥ï.PÀ®ÄUÀ¼ÀÄ<br>22.40 ¹.¨ËAqÀj<br>179 f.L.¥ÉÃmï<br>134 ¸ÁåA¥À ï ¥Ámï<br>0 PÉÃgÁ£ï<br>7 PÁvï ªÀiËAnAUï | 21.00 | 255.70 Q.«ÄÃ.(J¸ï.r)<br>1623 Dgï.J¥ï.PÀ®ÄUÀ¼ÀÄ<br>22.40 ¹.¨ËAqÀj<br>179 f.L.¥ÉÃmï<br>134 ¸ÁåA¥À ï ¥Ámï<br>0 PÉÃgÁ£ï<br>7 PÁvï ªÀiËAnAUï | 21.00 |
| 4 | 2406-01-102-2-81-KSFMBC-139-Major Works (Plan) | Bid Process & Technical Evaluation of Bids.<br>Financial Evaluation of bids<br>Infrastructure Development 7 Units<br>Study, Design, & development of ForDIS<br>Operationalization in 4 Pilot Division. | 60.00 | 41.00 | Bid Process & Technical Evaluation of<br>Financial Evaluation of bids<br>Infrastructure Development 7 Units<br>Study, Design, & development of ForDIS<br>Operationalization in 4 Pilot Division. | 41.00 | Bid Process & Technical Evaluation of Bids.<br>Financial Evaluation of bids<br>Infrastructure Development 7 Units<br>Study, Design, & development of ForDIS<br>Operationalization in 4 Pilot Division. | 41.00 |